ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಸೋಮವಾರ, ಏಪ್ರಿಲ್ 22, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 341 RNI : 27369/75

janathavani@mac.com
www.janathavani.com
08192 254736 91642 99999

## ಬಿಸಿಲ ಪ್ರಕೋಪ ತೀವ್ರ



**ತಾಪಮಾನ ವಾಡಿಕೆಗಿಂತ 6 ಡಿಗ್ರಿವರೆಗೆ ಹೆಚ್ಚಳ**

ನವದೆಹಲಿ, ಏ. 21 – ಭಾನುವಾರ ದೇಶಾದ್ಯಂತ ಬಿಸಿಲ ಪ್ರಕೋಪ ಹೆಚ್ಚಾಗಿದೆ. ಹಲವು ಭಾಗಗಳಲ್ಲಿ ತಾಪಮಾನ ವಾಡಿಕೆಗಿಂತ 4ರಿಂದ ಆರು ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ.

ಒಡಿಶಾ ಹಾಗೂ ರಾಯಲ್ ಸೀಮಾ, ಪಶ್ಚಿಮ ಬಂಗಾಳ, ಜಾರ್ಖಂಡ್, ವಿದರ್ಭ, ಛತ್ತೀಸ್ ಘಡ, ಮಧ್ಯ ಪ್ರದೇಶ, ತೆಲಂಗಾಣ ಹಾಗೂ ಆಂಧ್ರ ಪ್ರದೇಶಗಳಲ್ಲಿ ತಾಪಮಾನ 42ರಿಂದ 45 ಡಿಗ್ರಿ ಸೆಲ್ಸಿಯಸ್‌ಗಳಷ್ಟಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಿಹಾರ, ಮಧ್ಯ ಪ್ರದೇಶ, ತಮಿಳುನಾಡು, ಪುದುಚೆರಿ ಹಾಗೂ ಉತ್ತರ ಪ್ರದೇಶಗಳಲ್ಲಿ ತಾಪಮಾನ 40ರಿಂದ 42 ಡಿಗ್ರಿ ಸೆಲ್ಸಿಯಸ್ ಆಗಿದೆ. ಪಶ್ಚಿಮ ಬಂಗಾಳದ ಗಂಗಾ ಬಯಲು, ಬಿಹಾರ, ಜಾರ್ಖಂಡ್ ಹಾಗೂ ಒಡಿಶಾಗಳಲ್ಲಿ ತಾಪಮಾನ ವಾಡಿಕೆಗಿಂತ 4ರಿಂದ 6 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. ಸಿಕ್ಕಿಂ, ಆಂಧ್ರ ಪ್ರದೇಶ, ತಮಿಳುನಾಡು, ಪುದುಚೆರಿ, ಕಾರೈಕಲ್, ಛತ್ತೀಸ್‌ಘಡ, ಮಧ್ಯ ಪ್ರದೇಶ (5ನೇ ಪುಟಕ್ಕೆ)

## ಆರೋಗ್ಯ ಪಾಲಿಸಿ ವಯೋಮಿತಿ ತೆರವು

ನವದೆಹಲಿ, ಏ. 21 - ಆರೋಗ್ಯ ವಿಮೆ ಪಾಲಿಸಿಗಳ ಮೇಲಿರುವ 65 ವರ್ಷಗಳ ಮಿತಿಯನ್ನು ವಿಮಾ ನಿಯಂತ್ರಕ ಐ.ಆರ್.ಡಿ.ಐ.ಎ. ತೆಗೆದು ಹಾಕಿದೆ.

ಸಮಗ್ರ ಆರೋಗ್ಯ ವಿಮೆ ಪಡೆಯಲು ಈ ಹಿಂದಿನಿಂದಲೂ ವಯೋಮಿತಿ ಇತ್ತು. ಗರಿಷ್ಠ ವಯೋಮಿತಿಯನ್ನು ತೆಗೆದು ಹಾಕುವ ಮೂಲಕ ಹೆಚ್ಚು ಜನ ಆರೋಗ್ಯ ಸೇವೆ ವ್ಯಾಪ್ತಿಗೆ (3ನೇ ಪುಟಕ್ಕೆ)

## 4 ವರ್ಷಗಳ ಪದವೀಧರರಿಗೆ ಎನ್.ಇ.ಟಿ., ಪಿ.ಹೆಚ್.ಡಿ.

ನವದೆಹಲಿ, ಏ. 21 – ನಾಲ್ಕು ವರ್ಷಗಳ ಸ್ನಾತಕ ಪದವಿ ಹೊಂದಿರುವವರು ಇನ್ನು ಮುಂದೆ ನೇರವಾಗಿ ಎನ್.ಇ.ಟಿ. ಪರೀಕ್ಷೆಗೆ ಹಾಜರಾಗಬಹುದು ಹಾಗೂ ನೇರವಾಗಿ ಪಿ.ಹೆಚ್.ಡಿ.ಗೆ (3ನೇ ಪುಟಕ್ಕೆ)

# ಕಾಂಗ್ರೆಸ್ ಬಂದರೆ ಮುಸ್ಲಿಮರಿಗೆ ಆಸ್ತಿ ಹಂಚಲಿದೆ

### ಅರ್ಬನ್ ನಕ್ಸಲ್ ಮನೋಭಾವದವರು ತಾಯಂದಿರು, ಸಹೋದರಿಯರ ಮಂಗಳ ಸೂತ್ರವನ್ನೂ ಬಿಡುವುದಿಲ್ಲ : ಮೋದಿ

ಜೈಪುರ, ಏ. 21 – ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಆಸ್ತಿಯನ್ನು ಮುಸ್ಲಿಮರಿಗೆ ಹಂಚಿಕೆ ಮಾಡಲಿದೆ. ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರು ದೇಶದ ಸಂಪನ್ಮೂಲದಲ್ಲಿ ಅಲ್ಪಸಂಖ್ಯಾತರಿಗೆ ಮೊದಲ ಹಕ್ಕಿದೆ ಎಂದು ಹೇಳಿದ್ದರು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದರು.

ರಾಜಸ್ಥಾನದ ಬನ್ಸ್‌ವಾರಾದಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡಿದ ಅವರು, ನಮ್ಮ ತಾಯಂದಿರು ಹಾಗೂ ಸಹೋದರಿಯರ ಬಳಿ ಇರುವ ಬಂಗಾರವನ್ನು ಲೆಕ್ಕ ಹಾಕುವುದಾಗಿ, ಮಾಹಿತಿ ಪಡೆಯುವುದಾಗಿ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿದೆ. ಅವರು ಈ ಬಗ್ಗೆ ಮಾಹಿತಿ ಪಡೆದು ಆಸ್ತಿಯನ್ನು ಹಂಚಲಿದ್ದಾರೆ. ಆಸ್ತಿಯಲ್ಲಿ ಅಲ್ಪಸಂಖ್ಯಾತರಿಗೆ ಮೊದಲ ಹಕ್ಕಿದೆ ಎಂದು ಮನಮೋಹನ್ ಸಿಂಗ್ ಸರ್ಕಾರ ತಿಳಿಸಿತ್ತು. ಅವರಿಗೇ ಕಾಂಗ್ರೆಸ್ ಆಸ್ತಿ ಹಂಚಲಿದೆ ಎಂದು ಹೇಳಿದರು.



ಈ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ದೇಶದ ಆಸ್ತಿಯಲ್ಲಿ ಮುಸ್ಲಿಮರಿಗೆ ಮೊದಲ ಹಕ್ಕಿದೆ ಎಂದು ತಿಳಿಸಿತ್ತು. ಇದರ ಅರ್ಥವೆಂದರೆ, ಈ ಆಸ್ತಿಯನ್ನು ಯಾರಿಗೆ ಹಂಚಲಾಗುತ್ತದೆ? ಯಾರಿಗೆ ಹೆಚ್ಚು ಮಕ್ಕಳಿರುತ್ತಾರೋ ಅವರಿಗೆ ಹಂಚಲಾಗುತ್ತದೆ. ಅವರು ನುಸುಳುಕೋರರಿಗೆ ಆಸ್ತಿ ಹಂಚಲಿದ್ದಾರೆ. ನೀವು ಕಷ್ಟಪಟ್ಟು ದುಡಿದ ಹಣ ನುಸುಳುಕೋರರಿಗೆ ಹೋಗಬೇಕೇ? ನೀವು ಅದನ್ನು ಒಪ್ಪುತ್ತೀರಾ? ಎಂದು ಪ್ರಶ್ನಿಸಿದರು.

ಈ ನಗರ ನಕ್ಸಲ್ ಮನೋಭಾವದವರು ನನ್ನ ತಾಯಂದಿರು ಹಾಗೂ ಸಹೋದರಿಯರ ಮಂಗಳಸೂತ್ರವನ್ನೂ ಬಿಡುವುದಿಲ್ಲ. ಅವರು ಆ ಹಂತಕ್ಕೆ ಬೇಕಾದರೂ ಹೋಗಬಲ್ಲರು ಎಂದು ಮೋದಿ ಆಕ್ರೋಶ ವ್ಯಕ್ತಪಡಿಸಿದರು.

ಅಲ್ಪಸಂಖ್ಯಾತರಿಗೆ, ಅದರಲ್ಲೂ ಮುಸ್ಲಿಮರಿಗೆ ಸಂಪನ್ಮೂಲಗಳ ಮೇಲೆ ಮೊದಲ ಹಕ್ಕಿರಬೇಕು ಎಂದು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು 2006ರಲ್ಲಿ ಹೇಳಿದ್ದನ್ನು ಮೋದಿ ಪ್ರಸ್ತಾಪಿಸಿದ್ದರು.

ಕಾಂಗ್ರೆಸ್ ಪಕ್ಷ ಸಾಮಾಜಿಕ ಹಾಗೂ ಆರ್ಥಿಕ ಜಾತಿ ಸಮೀಕ್ಷೆ ನಡೆಸುವುದಾಗಿ ತಿಳಿಸಿದೆ. ಆಸ್ತಿ ಮರು ಹಂಚಿಕೆ ಬಗ್ಗೆ ಕಾಂಗ್ರೆಸ್ ಪಕ್ಷ ಯಾವುದೇ ಹೇಳಿಕೆ ನೀಡಿಲ್ಲ. ಆದರೆ, ದೇಶದ ಆಸ್ತಿ ಸಮಾನ ಹಂಚಿಕೆಗಾಗಿ ಸಮೀಕ್ಷೆ ನಡೆಸುವ ಅಗತ್ಯವಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದರು.

ಈ ಬಗ್ಗೆ ಮಾತನಾಡಿದ ಮೋದಿ, ಕಾಂಗ್ರೆಸ್ ಪಕ್ಷ ಈಗ ಎಡಪಂಥೀಯರ ಮುಷ್ಠಿಯಲ್ಲಿ ಸಿಲುಕಿದೆ. ಆ (3ನೇ ಪುಟಕ್ಕೆ)







# ಬೇಸಿಗೆ ಉಷ್ಣ ತಣಿಸಲು ಚಿಂಚಾ ಪಾನಕ ಸೇವಿಸಿ ಆರೋಗ್ಯ ವೃದ್ಧಿಸಿಕೊಳ್ಳಬೇಕು



ದಾವಣಗೆರೆ, ಏ. 21 - ಬೇಸಿಗೆ ಬಂತೆಂದರೆ ಬಿಸಿಲಿನ ತಾಪಕ್ಕೆ ಯಾವ ಊಟವು ರುಚಿಸದು ಮತ್ತು ಬಾಯಾರಿಕೆ ತಣಿಸಲು ತಂಪು ಪಾನೀಯಗಳಿಗೆ ಮೊರೆ ಹೋಗುವವರೇ ಹೆಚ್ಚು, ಆಯುಷ್ ಇಲಾಖೆ ಜನರ ಆರೋಗ್ಯ ವೃದ್ಧಿ ಜೊತೆಗೆ ಬಿಸಿಲಿನ ಬಾಯಾರಿಕೆ ದಾಹ ಕಡಿಮೆ ಮಾಡಲು ಆಯುಷ್ ಪದ್ದತಿಯ ಚಿಂಚಾ ಪಾನಕದ ಪರಿಚಯ ಮಾಡಿದ್ದು ಇದು ಆರೋಗ್ಯ ಸಂರಕ್ಷಣೆಗೆ ಬಹು ಉಪಯೋಗಿ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.

ಅವರು ಗುರುವಾರ ಆಯುಷ್ ಇಲಾಖೆಯಿಂದ ಪರಿಚಯಿಸುತ್ತಿರುವ ಆರೋಗ್ಯಕರ ಆಯುಷ್ ಪಾನಕ ಪರಿಚಯ ಕಾರ್ಯಕ್ರಮದ ಅಂಗವಾಗಿ ಜಿಲ್ಲಾಧಿಕಾರಿ ಗಳ ಕಚೇರಿಯಲ್ಲಿ ಚಿಂಚಾ ಪಾನಕ ಪ್ರಾತ್ಯ ಕ್ಷಿಕೆ ಕಾರ್ಯಕ್ರಮದಲ್ಲಿ ಪಾನಕ ಸ್ವಾಧಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

**ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್**


ಗಾದೆಯ ಮಾತು, ಹಿತ್ತಲ ಗಿಡ ಮದ್ದಲ್ಲ ಎಂಬಂತೆ ನಮ್ಮ ಮನೆಯಲ್ಲಿಯೇ ಸಿಗುವ ವಸ್ತುಗಳಲ್ಲಿಯೇ ಆರೋಗ್ಯ ವೃದ್ಧಿ, ಸಂರಕ್ಷಣೆ, ರೋಗ ನಿರೋಧಕ ಅಂಶಗಳಿರುತ್ತವೆ. ಆದರೆ ನಮಗೆ ಅವನ್ನು ತಯಾರಿಸಿಕೊಳ್ಳುವ ವಿಧಾನದ ಅರಿವಿರಬೇಕು.

ಆಯುಷ್ ಇಲಾಖೆ ಮನೆಯಲ್ಲಿ ಸಿಗುವ ವಸ್ತುಗಳನ್ನು ಉಪಯೋಗಿಸಿ ತಯಾರಿಸಬಹುದಾದ ಚಿಂಚಾ ಪಾನಕ ಅಂದರೆ ಹುಣಸೆ ಹಣ್ಣಿನ ಪಾನಕ ಎಂದು ಇದನ್ನು ಕರೆಯಲಾಗುತ್ತದೆ. ಇದರಿಂದ ಬಾಯಾರಿಕೆ ಕಡಿಮೆ, ಜೊತೆಗೆ ದೇಹದಲ್ಲಿನ ಉಷ್ಣತೆಯನ್ನು ತಗ್ಗಿಸಲಿದ್ದು ಮಲಬದ್ದತೆ ನಿವಾರಿಸಲಿದೆ, ಇದು ಆರೋಗ್ಯಕರ ಪಾನಿಯವಾಗಿದೆ ಎಂದರು.

ಚಿಂಚಾ ಪಾನಕ ತಯಾರಿಸುವ ವಿಧಾನ. 5 ಲೀಟರ್ ಪಾನಕ ತಯಾರಿಸಲು 100 ಗ್ರಾಂ ಹುಣಸೆ ಹಣ್ಣು, 40 ಗ್ರಾಂ ಬೆಲ್ಲದ ಪುಡಿ, 10 ಗ್ರಾಂ ಜೀರಿಗೆ ಪುಡಿ, 5 ಗ್ರಾಂ ಕಾಳು ಮೆಣಸಿನ ಪುಡಿ, 5 ಗ್ರಾಂ ಸೈಂಧವ ಲವಣ ಮಿಶ್ರಣ ಮಾಡಬೇಕು. ಸೇವನೆ ಮಾತ್ರ 50 ರಿಂದ 100 ಮಿಲಿಯಷ್ಟು ಅಗತ್ಯ ನೀರು ಸೇರಿಸಿಕೊಂಡು ಕುಡಿಯಬೇಕು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಎಸ್. ಸೈಯ್ಯದಾ ಆಫ್ರೀನ್ ಭಾನು ಬಳ್ಳಾರಿ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಯೋಗೇಂದ್ರಕುಮಾರ್, ಎನ್.ಐ.ಸಿ. ಅಧಿಕಾರಿ ಉದಯ್, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ ಮಠದ್, ಆಯುಷ್ ವೈದ್ಯ ಡಾ. ಎಂ.ಸಿ. ಸುರೇಶ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಆನಗೋಡಿನಲ್ಲಿ ನಾಳೆ ಶ್ರೀ ಮರುಳಸಿದ್ದೇಶ್ವರ ರಥೋತ್ಸವ



ದಾವಣಗೆರೆ, ಏ.21- ತಾಲ್ಲೂಕಿನ ಆನಗೋಡು ಗ್ರಾಮದಲ್ಲಿ ಶ್ರೀ ಮರುಳಸಿದ್ದೇಶ್ವರ ರಥೋತ್ಸವವು ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಾಡಿದ್ದು ದಿನಾಂಕ 23ರ ಮಂಗಳವಾರ ಸಂಜೆ 5.30ಕ್ಕೆ ನಡೆಯಲಿದೆ.

ಸಾಧು ವೀರಶೈವ ಸಮಾಜದ ಅಧ್ಯಕ್ಷರೂ, ರಾಜ್ಯ ರೈತ ಸಂಘದ ಅಧ್ಯಕ್ಷರೂ ಆದ ಹೆಚ್.ಆರ್. ಬಸವರಾಜಪ್ಪ ಅವರು ಮಂಗಳವಾರ ಸಂಜೆ 5.30ಕ್ಕೆ ನಡೆಯುವ ಸರ್ವ ಶರಣ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದಾರೆ.ರಥೋತ್ಸವದ ಅಂಗವಾಗಿ ನಾಳೆ ದಿನಾಂಕ 22ರ ಸೋಮವಾರ ರಾತ್ರಿ 8 ಗಂಟೆಗೆ ಅರಿಶಿಣ ಎಣ್ಣೆ ಕಾರ್ಯಕ್ರಮ ಜರುಗಲಿದೆ.

ದಿನಾಂಕ 23ರ ಮಂಗಳವಾರ ಸಂಜೆ 4 ಗಂಟೆಗೆ ಆನಗೋಡು ಗ್ರಾಮದ ವಾಲ್ಮೀಕಿ ಜನಾಂಗದವರು ಮತ್ತು ಆದಿ ಕರ್ನಾಟಕ ಜನಾಂಗದವರು ಹಾಗೂ ಉಳುಪಿನ ಕಟ್ಟೆ ಜನಾಂಗದವರಿಂದ ಅರಿಶಿಣ ಎಣ್ಣೆ ಕಾರ್ಯಕ್ರಮ, ದಿನಾಂಕ 24ರ ಬುಧವಾರ ರಾತ್ರಿ 8 ಕ್ಕೆ ಓಕಳಿ ಏರ್ಪಾಡಾಗಿದೆ.

## ನೇಹಾ ಪ್ರಕರಣ : ಹರಿಹರದಲ್ಲಿ ಪ್ರತಿಭಟನೆ



ಹರಿಹರ, ಏ. 21 - ಹುಬ್ಬಳ್ಳಿ ಬಿವಿಬಿ ಕಾಲೇಜಿನ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರನ್ನು ಕೊಲೆ ಮಾಡಿರುವುದು ಖಂಡನೀಯ. ಕೃತ್ಯವನ್ನು ಎಸಗಿರುವ ವ್ಯಕ್ತಿಯನ್ನು ಕೂಡಲೇ ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿ ಕಾರ್ತಿಕ್ ಸಾಂಸ್ಕೃತಿಕ ಸೇವಾ ಅಭಿವೃದ್ಧಿ ಸಂಸ್ಥೆ ವತಿಯಿಂದ ತಹಶೀಲ್ದಾರ್ ಗುರುಬಸವರಾಜ್ ಅವರಿಗೆ ಮನವಿ ಅರ್ಪಿಸಿದರು.

ಈ ವೇಳೆ ಮಾತನಾಡಿದ ಕಾರ್ತಿಕ್ ಸಾಂಸ್ಕೃತಿಕ ಸೇವಾ ಅಭಿವೃದ್ಧಿ ಸಂಸ್ಥೆ ಕಾರ್ಯದರ್ಶಿ ಕವಿತಾ ಮಲ್ಲಿಕಾರ್ಜುನ್ ಮಾತನಾಡಿ, ಹುಬ್ಬಳ್ಳಿ ಬಿವಿಬಿ ಕಾಲೇಜು ಆವರಣದಲ್ಲಿ ನಡೆದ ಘಟನೆ ರಾಜ್ಯದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಹೇಗೆ ಕೊಡಿಸಬೇಕು ? ಎಂದು ಪೋಷಕರು ಆತಂಕವನ್ನು ಪಟ್ಟುಕೊಳ್ಳುವಂತಹ ಘಟನೆ ನಡೆದಿದ್ದು, ಇದು ನಿಜಕ್ಕೂ ಸಮಾಜಕ್ಕೆ ಒಂದು ಸವಾಲಾಗಿ ಪರಿಣಮಿಸಿದೆ. ಆದ್ದರಿಂದ ಇಂತಹ ಕೃತ್ಯಗಳು ಮರುಕಳಿಸದಂತೆ ಮಾಡಬೇಕಾದರೆ ಆರೋಪಿ ಫಯಾಜ್‌ಗೆ ನ್ಯಾಯಲಯವು ಜಾಮೀನು ಕೊಡದೇ ಗಲ್ಲು ಶಿಕ್ಷೆಯನ್ನು ನೀಡಬೇಕು ಎಂದು ಆಗ್ರಹಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಸುಮನ್, ಡಾ ಖಿಮಿತ್ಕರ್ ನಂದೀಶ್, ಮಮತಾ, ಬಸವರಾಜ್ ಜಿ.ಹೆಚ್. ಅಂಬುಜಾ, ಪಿ.ರಾಜೊಳ್ಳಿ, ವೀರೇಶ್ ಅಜ್ಜಣ್ಣನವರ್, ಕವಿತಾ ಪೇಟೆಮಠ ಇತರರು ಹಾಜರಿದ್ದರು.

## ಹರಪನಹಳ್ಳಿ ಕ್ಷೇತ್ರದಲ್ಲಿ ಇಂದು ಗಾಯತ್ರಿ ಸಿದ್ದೇಶ್ವರ ಇಂದಿನ ಪ್ರಚಾರ



ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ಹರಪನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಾಜಿ ಸಚಿವ ಜಿ.ಕರುಣಾಕರರೆಡ್ಡಿ ಅಧ್ಯಕ್ಷತೆಯಲ್ಲಿ ಇಂದು ಪ್ರಚಾರ ನಡೆಸಲಿದ್ದಾರೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಅಡವಿಹಳ್ಳಿ ಗ್ರಾಮಗಳಲ್ಲಿ ಮತ ಬೆಳಗ್ಗೆ 10 ಕ್ಕೆ ಬಾಗಳಿ, 10.45 ಕ್ಕೆ ನಂದಿಬೇವೂರು, 11.30 ಕ್ಕೆ ಮೈದೂರು, 12.15 ಕ್ಕೆ ಚಿಗಟೇರಿ, ಮಧ್ಯಾಹ್ನ 1 ಗಂಟೆಗೆ ಬೆಣ್ಣೆಹಳ್ಳಿ, 1.45 ಕ್ಕೆ ಮತ್ತಿಹಳ್ಳಿ, 3.30 ಕ್ಕೆ ಸಾಸ್ವಿಹಳ್ಳಿ, 4.15 ಕ್ಕೆ ಕಡಬಗೇರಿ, 5 ಕ್ಕೆ ನಿಚ್ಚವ್ವನಹಳ್ಳಿ, 5.45 ಕ್ಕೆ ಯಾಚಿಸಲಿದ್ದಾರೆ.

## ನಗರದಲ್ಲಿ ನಾಳೆ ಅಕ್ಕಮಹಾದೇವಿ ಜಯಂತಿ, ದತ್ತಿ ಕಾರ್ಯಕ್ರಮ


ದಾವಣಗೆರೆ, ಏ. 21 - ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ, ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ ನಾಡಿದ್ದು ದಿನಾಂಕ 23ರ ಬೆಳಿಗ್ಗೆ 10.30ಕ್ಕೆ 152ನೇ ಕದಳಿ ಕಮ್ಮಟದಲ್ಲಿ ಅಕ್ಕಮಹಾದೇವಿ ಜಯಂತಿ ಹಾಗೂ ದತ್ತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಎಂಸಿಸಿ ಎ ಬ್ಲಾಕ್‌ನಲ್ಲಿರುವ ಗುರು ಬಸವ ಮಂಟಪದಲ್ಲಿ ನಡೆಯವ ಕಾರ್ಯಕ್ರಮದಲ್ಲಿ ಕದಳಿ ಮಹಿಳಾ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷರಾದ ಗಾಯತ್ರಿ ವಸ್ತ್ರದ್ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀಮತಿ ಜಿ.ಎಸ್. ಸುನೀತಾ, ಸೂರ್ಯಪ್ರಭಾ ಸುರೇಶ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ರಾಜಶೇಖರಯ್ಯ ಮತ್ತು ಆರ್. ದಯಾನಂದ್ ದತ್ತಿ (ದಾಸೋಹಿಗಳು ಶರಣೆ ಪಂಕಜ ದಯಾನಂದ್), ಮಾಗನೂರು ಭರಮಮ್ಮ ಮತ್ತು ಬಿ.ಸಿ. ಆಲದ ಕಟ್ಟೆ ದತ್ತಿ (ದಾಸೋಹಿ ಶರಣ ಮಾಗನೂರು ಗುರುಪಾದಪ್ಪ) ಕಾರ್ಯಕ್ರಮಗಳು ನಡೆಯಲಿದ್ದು, ಎ.ವಿ.ಕೆ. ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಕವಿತಾ ಆರ್.ಜಿ. ಅಕ್ಕನ ಹೋರಾಟದ ವಿಷಯವಾಗಿ ದತ್ತಿ ಅನುಭಾವ ನೀಡುವರು.

ಕಾರ್ಯಕ್ರಮದಲ್ಲಿ ಕೆ.ಬಿ. ಪರಮೇಶ್ವರಪ್ಪ, ವಿನೋದ ಅಜಗಣ್ಣನವರ ಮಮತಾ ನಾಗರಾಜ್, ಪ್ರಮೀಳಾ ನಟರಾಜ್, ಯಶಾ ದಿನೇಶ್, ಉಪಸ್ಥಿತರಿರುವರು ಎಂದು ಕದಳಿ ಮಹಿಳಾ ವೇದಿಕೆಯ ಖಜಾಂಚಿ ರತ್ನ ಸಿ. ರೆಡ್ಡಿ ತಿಳಿಸಿದರು.

## ವಿನಯ್ ಮೇಲಿನ ಆರೋಪ ಸುಳ್ಳು



ದಾವಣಗೆರೆ, ಏ.21- ಸಂತೇಬೆನ್ನೂರಿಗೆ ಶನಿವಾರ ಸಮರ್ಥ್ ಶಾಮನೂರು ಹಾಗೂ ಕಾಂಗ್ರೆಸ್ ಮುಖಂಡರು ಭೇಟಿ ನೀಡಿ ಸಮಾಲೋಚನೆ ಮಾಡುವಾಗ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಅವರು ಕೋಟಿಗಟ್ಟಲೆ ಹಣ ಪಡೆದಿದ್ದಾರೆ ಎಂಬ ಆರೋಪ ಮಾಡಿದ್ದೆ ಎಂಬ ಹೇಳಿಕೆ ಸುಳ್ಳು. ಇದು ಸತ್ಯಕ್ಕೆ ದೂರವಾದದ್ದು ಎಂದು ಸಂತೇಬೆನ್ನೂರು ಕಾಂಗ್ರೆಸ್ ಮುಖಂಡ ಸಿದ್ಧಪ್ಪ ಅವರೇ ಸ್ಪಷ್ಟನೆ ನೀಡಿದ್ದಾರೆ.

ಸಮರ್ಥ ಅವರು ನಮ್ಮ ಮನೆಗೆ ಬಂದಿದ್ದರು. ಈ ವೇಳೆ ಸಭೆ ನಡೆಸಿದಾಗ ಮಾತನಾಡಿದ್ದೆ. ಬಿಜೆಪಿಯವರ ಬಳಿ ವಿನಯ್ ಕುಮಾರ್ ಅವರು ಹಣ ತೆಗೆದುಕೊಂಡಿದ್ದೇನೆ ಎಂದಿದ್ದು ತಪ್ಪು ಗ್ರಹಿಕೆ. ಅದು ತಪ್ಪು. ಯಾರೂ ಇದನ್ನು ನಂಬಬಾರದು ಎಂದು ಅವರು ಸ್ಪಷ್ಟನೆ ಕೊಟ್ಟಿದ್ದಾರೆ.

## ತೋರಣಗಟ್ಟೆಯಲ್ಲಿ ನಾಳೆ ರಥೋತ್ಸವ

ಜಗಳೂರು, ಏ. 21 - ತಾಲ್ಲೂಕಿನ ತೋರಗಟ್ಟೆಯಲ್ಲಿ ನಾಳೆ ಹುಣ್ಣಿಮೆ ದಿನದಂದು ಸಂಜೆ 5.30ಕ್ಕೆ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಜರುಗುವುದು. ಮರುದಿನ ಬೆಳಿಗ್ಗೆ ಶ್ರೀ ಸ್ವಾಮಿಯ ಉಯ್ಯಾಲೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮ ಇರುತ್ತದೆ ಎಂದು ಭಾಸ್ಕರ ಗೋವಿಂದರಾಜು ತಿಳಿಸಿದ್ದಾರೆ.

## ನಾಳೆ ಕೋದಂಡರಾಮ ದೇವರ ತೇರು

ದಾವಣಗೆರೆ, ಏ. 21 - ನಗರದ ಶ್ರೀ ಧರ್ಮ ಪ್ರವರ್ತಕ ರಾಜನಹಳ್ಳಿ ಹನುಮಂತಪ್ಪ ಕಟ್ಟಿಸಿರುವ ಕೋದಂಡರಾಮ ದೇವರ ದೇವಸ್ಥಾನದಲ್ಲಿ ಶ್ರೀ ಕ್ರೋಧಿನಾಮ ಸಂವತ್ಸರದ ಚೈತ್ರ ಶುದ್ಧ ಪೂರ್ಣಿಮೆಯಂದು ಶ್ರೀ ಹನುಮ ಜಯಂತಿ ಆಚರಿಸಲಾಗುವುದು.

ನಾಳೆ ದಿನಾಂಕ 23 ರ ಮಂಗಳವಾರ ಬೆಳಿಗ್ಗೆ 7 ರಿಂದ 8 ರವರೆಗೆ ಶ್ರೀ ಆಂಜನೇಯ ಸ್ವಾಮಿಯ ವಿಚಾರವಾಗಿ ಎಚ್.ಬಿ. ಮಂಜುನಾಥ ಶಾಸ್ತ್ರಿ ಇವರಿಂದ ಉಪನ್ಯಾಸ ಏರ್ಪಡಿಸಲಾಗಿದೆ. ಬೆಳಿಗ್ಗೆ 8 ಗಂಟೆಯಿಂದ ರಥೋತ್ಸವ ಹಾಗೂ ಪ್ರಸಾದವನ್ನು ವಿನಿಯೋಗವಿರುತ್ತದೆ. ಮಧ್ಯಾಹ್ನ 1 ರಿಂದ ಭೋಜನ ವ್ಯವಸ್ಥೆ ಕಲ್ಪಿಸಲಾಗಿದ್ದು, ರಾಜನಹಳ್ಳಿ ಆರ್ಯವೈಶ್ಯ ರಾಜನಹಳ್ಳಿ ಸೇವಕರ್ತರಾಗಿದ್ದಾರೆ.

## ಶಿರಮಗೊಂಡನಹಳ್ಳಿಯಲ್ಲಿ ಇಂದು ಶ್ರೀ ಚನ್ನಬಸವೇಶ್ವರ ರಥೋತ್ಸವ



ದಾವಣಗೆರೆ ಸಮೀಪದ ಶಿರಮಗೊಂಡನಹಳ್ಳಿಯಲ್ಲಿ ಇಂದು ರಾತ್ರಿ 8 ಗಂಟೆಗೆ ಶ್ರೀ ಚನ್ನಬಸವೇಶ್ವರ ಸ್ವಾಮಿ ರಥೋತ್ಸವ ನಡೆಯಲಿದೆ. ಆಗಮಿಸುವ ಭಕ್ತಾದಿಗಳಿಗೆ ಶ್ರೀ ಚನ್ನಬಸವೇಶ್ವರ ಸ್ವಾಮಿಯ ದಾಸೋಹ ಸಮಿತಿಯಿಂದ ದ್ವಿತೀಯ ವರ್ಷದ ಅನ್ನ ಸಂತರ್ಪಣೆ ಕಾರ್ಯಕ್ರಮವು ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 2ರವರೆಗೆ ನಡೆಯಲಿದೆ.

## ಐರಣಿಯಲ್ಲಿ ಇಂದಿನಿಂದ ಅಡ್ಡಪಲ್ಲಕ್ಕಿ, ಮಹಾರಥೋತ್ಸವ, ಅಖಂಡ ಭಜನೆ

ರಾಣೇಬೆನ್ನೂರು ತಾಲ್ಲೂಕಿನ ಐರಣಿ ಮನಿಮಠದ ಶ್ರೀ ಗಜದಂಡ ಸ್ವಾಮಿಗಳ ಸಾನ್ನಿಧ್ಯದಲ್ಲಿ ಇಂದಿನಿಂದ ಇದೇ ದಿನಾಂಕ 24 ರವರೆಗೆ ಮುಪ್ಪಿ ನಾರ್ಯರ ನೂತನ ಮಹಾರಥೋತ್ಸವ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮ ಗಳು ನಡೆಯಲಿದ್ದು, ಗ್ರಾ.ಪಂ. ಹಾಗೂ ಗ್ರಾಮದ ವಿವಿಧ ಸಂಘಟನೆಗಳು ಒಟ್ಟಾಗಿ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸುತ್ತಿದ್ದಾರೆ ಎಂದು ಶ್ರೀ ಮಠದ ಭಕ್ತ ಹನುಮಂತಪ್ಪ ಚಳಗೇರಿ ತಿಳಿಸಿದರು.

ದಿನಾಂಕ 17 ರಿಂದ ಸಾದು ಮಹಾತ್ಮರ ಪಾದಪೂಜೆ, ಪ್ರವಚನ, ಮಹಾಪೂಜೆ ನಡೆದಿದ್ದು, ಇಂದು ಅಡ್ಡಪಲ್ಲಕ್ಕಿ, ನಾಳೆ ದಿನಾಂಕ 23 ರಂದು ಗಜದಂಡ ಶ್ರೀ ಗಳ 31ನೇ ವರ್ಷದ ಪಟ್ಟಾಭಿಷೇಕದ ಸ್ಮರಣೆಗೆ ತುಲಾಭಾರ, ಸಾಮೂಹಿಕ ಮದುವೆಗಳು ನಂತರದಲ್ಲಿ ಧರ್ಮಸಭೆ, ಮಧ್ಯಾಹ್ನ ಮುಪ್ಪಿನಾರ್ಯರ ನೂತನ ರಥೋತ್ಸವ ನಡೆಯಲಿದೆ.

24 ರಂದು ವೀಭೂತಿ ಮತ್ತು ಕವಡಿ ಪೂಜೆ ನಡೆಯಲಿದೆ ಎಂದು ಹನಮಂತಪ್ಪ ಹೇಳಿದರು.

## 23ರಂದು ಸಿದ್ಧೇಶ್ವರ ದೇವರ ರಥೋತ್ಸವ

ರಾಣೇಬೆನ್ನೂರು, ಏ. 20 - ನಗರದ ಸಿದ್ಧೇಶ್ವರ ದೇವರ ರಥೋತ್ಸವದ ಅಂಗವಾಗಿ ಏ.21ರಿಂದ 24ರ ವರೆಗೆ ವಿವಿಧ ಧಾರ್ಮಿಕ ಕಾರ್ಯಗಳು ಜರುಗಲಿವೆ.

ಏ.21ರಂದು ಸಂಜೆ 6ಕ್ಕೆ ಕಂಕಣಧಾರಣೆ, ಏ.22ರಂದು ಸಂಜೆ 6ಕ್ಕೆ ಹೂವಿನ ತೇರು, ಏ.23ರಂದು ಬೆಳಗ್ಗೆ 6ಕ್ಕೆ ಗುಗ್ಗಳ, ಸಂಜೆ 5ಕ್ಕೆ ಮಹಾರಥೋತ್ಸವ, ಏ.24ರಂದು ಸಂಜೆ ಓಕುಳಿ ಹಾಗೂ ಬೆಲ್ಲದ ಬಂಡಿ ಉತ್ಸವ ಜರುಗಲಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## ಹಳೇಪೇಟೆಯಲ್ಲಿ ನಾಳೆ ರಥೋತ್ಸವ



ದಾವಣಗೆರೆ ಹಳೇಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ಇಂದಿನಿಂದ ಇದೇ ದಿನಾಂಕ 24 ರವರೆಗೆ ನಡೆಯಲಿದೆ.

ಇಂದು ಬೆಳಿಗ್ಗೆ 6 ಗಂಟೆಗೆ ರುದ್ರಾಭಿಷೇಕ ಮತ್ತು ಬೆಳಿಗ್ಗೆ 9 ಗಂಟೆಗೆ ರುದ್ರ ಸಂತರ್ಪಣೆ, ದಿನಾಂಕ 22 ರಂದು ಬೆಳಿಗ್ಗೆ 6 ಗಂಟೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಮತ್ತು ಅಗ್ನಿಕುಂಡ ಹಾಗೂ ಉತ್ಸವ ನಗರದ ರಾಜಬೀದಿಗಳಲ್ಲಿ ನಡೆಯುತ್ತದೆ.

ದಿನಾಂಕ 23ರ ಸಂಜೆ 7 ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವ, ದಿನಾಂಕ 24 ರಂದು ರಾತ್ರಿ 8 ಕ್ಕೆ ಓಕುಳಿ ಉತ್ಸವ ನಡೆಯುತ್ತದೆ.

## ಆನ್‌ಲೈನ್‌ನಲ್ಲಿಂದು ಶರಣ ಚಿಂತನ ಗೋಷ್ಠಿ

ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು (ಮೈಸೂರು) ವತಿಯಿಂದ ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿಯನ್ನು ಇಂದು ಬೆಳಿಗ್ಗೆ 7 ರಿಂದ 9ರವರೆಗೆ ನಡೆಯಲಿದೆ. ವಿದುಷಿ ಡಾ. ಜ್ಯೋತಿ ಶಂಕರ್ ಅವರು ಅಕ್ಕನೆಂಬ ವಿಷಯ ಕುರಿತು ಉಪನ್ಯಾಸ ನೀಡುವರು. ಗಾಯತ್ರಿ ವಸ್ತ್ರದ್ ಸೇರಿದಂತೆ, ಮತ್ತಿತರರು ಉಪಸ್ಥಿತರಿರುವರು.

# ತಳ ಸಮುದಾಯದ ಸಮಸ್ಯೆ ಪರಿಹರಿಸಲು ಶ್ರಮಿಸುತ್ತಿದ್ದ ಶಿವರಾಮ್ ಛಲವಾದಿ ಸಮಾಜವನ್ನೂ ಸದೃಢವಾಗಿ ಕಟ್ಟಲು ಪಣ ತೊಟ್ಟಿದ್ದರು



ಹರಪನಹಳ್ಳಿ, ಏ.21- ಕನ್ನಡದಲ್ಲಿ ಐಎಎಸ್ ಪರೀಕ್ಷೆ ಬರೆದು, ದಕ್ಷ ಅಧಿಕಾರಿಯಾಗಿ, ಶಿಸ್ತು ಸಂಸ್ಕಾರಯುತ ಬದುಕು ನಡೆಸಿದ ಕೆ. ಶಿವರಾಮ್ ಅವರ ಆದರ್ಶವನ್ನು ತಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ನಿಲಗುಂದದ ಗುಡ್ಡದ ವೀರಕ್ತಮಠದ ಶ್ರೀ ಚನ್ನಬಸವ ಶಿವಯೋಗಿಗಳು ಹೇಳಿದರು.

ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ಕೆ. ಶಿವರಾಮ್ ಅಭಿಮಾನಿ ಬಳಗದ ವತಿಯಿಂದ ಹಮ್ಮಿಕೊಂಡಿದ್ದ 'ನುಡಿ ನಮನ' ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದರು.

ದಲಿತ ಮತ್ತು ಬಡವರ ಮಕ್ಕಳು ಶಿಕ್ಷಣ ಪಡೆಯಬೇಕು ಎಂಬುದೇ ಅವರ ಧ್ಯೇಯವಾಗಿತ್ತು. ಈ ನಿಟ್ಟಿನಲ್ಲಿ ಅವರು, ಸರ್ಕಾರಿ ಯೋಜನೆಗಳನ್ನು ದೊರಕಿಸುವ ಜತೆಗೆ ವೈಯಕ್ತಿಕ ಸಹಾಯಯೂ ಮಾಡುತ್ತಿದ್ದರು.

ವಿಜಯನಗರದ ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಬಣ್ಣದ ಮನೆ ಸೋಮಶೇಖರ್ ಮಾತನಾಡಿ, ಕೆ.ಶಿವರಾಮ್ ರಾಜಕೀಯದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು. ಆದರೆ ಪಕ್ಷದಿಂದ ಟಿಕೆಟ್ ಲಭಿಸದೇ ಇದ್ದರೂ ನಿಷ್ಠೆಯಿಂದ ಪಕ್ಷಕ್ಕಾಗಿ ದುಡಿಯುತ್ತಿದ್ದರು. ಜನಸೇವೆ ಮಾಡುವ ಉದ್ದೇಶದಿಂದ ಛಲವಾದಿ ಮಹಾಸಭಾ ಸ್ಥಾಪಿಸಿದ್ದರು ಎಂದು ನೆನಪಿಸಿಕೊಂಡರು.

**ಹರಪನಹಳ್ಳಿ ಕಾರ್ಕ್ರಮದಲ್ಲಿ ನಿಲಗುಂದದ ಗುಡ್ಡದ ವೀರಕ್ತಮಠದ ಶ್ರೀ ಚನ್ನಬಸವ ಶಿವಯೋಗಿಗಳವರ ಮೆಚ್ಚುಗೆ**

ಶ್ರೀ ಶರಣ ಬಸವ ಬುದ್ಧ ಭೀಮಜೀ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಗುಂಡಗತ್ತಿ ಕೊಟ್ರಪ್ಪ ಮಾತನಾಡಿ, ಶಿವರಾಮ್ ಅವರು ತಳ ಸಮುದಾಯ ಮತ್ತು ಶೋಷಿತ ವರ್ಗಗಳ ಸಮಸ್ಯೆ ಪರಿಹರಿಸಲು ಹೆಚ್ಚಿನ ಶ್ರಮ ಹಾಕುತ್ತಿದ್ದರು. ಮತ್ತು ಛಲವಾದಿ ಸಮಾಜವನ್ನು ಸದೃಢವಾಗಿ ಕಟ್ಟಲು ರಾಜ್ಯದಲ್ಲಿ ಸಂಚಾರ ನಡೆಸಿದ್ದರು ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಮಾತನಾಡಿ, ಶಿವರಾಮ್ ಅವರು ಅಧಿಕಾರಿಯಾಗಿದ್ದರೂ ಯಾವ ರಾಜಕಾರಣಿ ಮತ್ತು ಸಚಿವರ ಮರ್ಜಿಗೆ ಒಳಗಾಗದೆ ದಲಿತರ ಪರವಾಗಿ ಕೆಲಸ ಮಾಡಿದರು. ದಲಿತರು ಅವರನ್ನು ಪ್ರೀತಿಸುತ್ತಿದ್ದರು. ಆದರೆ, ದಲಿತ ರಾಜಕೀಯ ನಾಯಕರು ಇವರನ್ನು ವಿರೋಧಿಸುತ್ತಿದ್ದರು ಎಂದರು.

ಅಂಬೇಡ್ಕರ್ ಸಮಾಜದ ತಾಲ್ಲೂಕು ಅಧ್ಯಕ್ಷ ನಿಚ್ಚವನಹಳ್ಳಿ ಭೀಮಪ್ಪ, ಉಪನ್ಯಾಸಕ ಅಜ್ಜಯ್ಯ, ಶಿಕ್ಷಕ ಅರ್ಜುನ್, ಪರಸಪ್ಪ, ಮುಖ್ಯ ಶಿಕ್ಷಕ ಸಹದೇವ, ಬುಡ್ಗ ಜಂಗಮ ಸಮಾಜದ ಜಿಲ್ಲಾ ಅಧ್ಯಕ್ಷ ಸಣ್ಣ ಅಜ್ಜಯ್ಯ, ಹಗರಿಬೊಮ್ಮನಹಳ್ಳಿ ಛಲವಾದಿ ಮಹಾಸಭಾದ ಅಧ್ಯಕ್ಷ ಗಾಳಿ ಬಸವರಾಜ, ನಿಸರ್ಗ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಕಲ್ಯಾಣದವರ್, ಶಿಕ್ಷಕ ಬಸವರಾಜ, ಶ್ರೀ ಶರಣ ಬಸವ ಬುದ್ಧ ಭೀಮಜೀ ವಿದ್ಯಾಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಕೊಟ್ರಮ್ಮ, ಮುಖಂಡರಾದ ಮುತ್ತಿಗಿ ಮಲ್ಲಿಕಾರ್ಜುನ್, ಮತ್ತಿಹಳ್ಳಿ ಕೆಂಚಪ್ಪ, ನಿವೃತ್ತ ಮುಖ್ಯ ಶಿಕ್ಷಕಿ ಶಕುಂತಲಮ್ಮ, ನಿಟ್ಟೂರು ನಾಗರಾಜ, ಮರಿಯಮ್ಮನಹಳ್ಳಿ ಮಂಜಣ್ಣ ಮತ್ತು ಇತರರು ಇದ್ದರು.

# ನೇಹಾ ಹತ್ಯೆಗೈದ ಫಯಾಜ್‌ಗೆ ಗಲ್ಲು ಶಿಕ್ಷೆ ವಿಧಿಸಲು ಮುಸ್ಲಿಂ ಸಮಾಜ ಆಗ್ರಹ



ಜಗಳೂರು, ಏ. 21 - ಹುಬ್ಬಳ್ಳಿಯ ಕಾಲೇಜು ವಿದ್ಯಾರ್ಥಿನಿ ನೇಹಾ ಹಿರೇಮಠ್‌ರವರನ್ನು ಬರ್ಬರವಾಗಿ ಹತ್ಯೆಗೈದ ನರಹಂತಕ ಫಯಾಜ್‌ನನ್ನು ಗಡೀಪಾರು ಮಾಡಿ ಗಲ್ಲು ಶಿಕ್ಷೆಗೊಳಪಡಿಸಬೇಕೆಂದು ತಾಲ್ಲೂಕು ಮುಸ್ಲಿಂ ಸಂಘದ ವತಿಯಿಂದ ಭಾನುವಾರ ಸಂಜೆ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಅಂಬೇಡ್ಕರ್ ವೃತ್ತದಿಂದ ಮಹಾತ್ಮಗಾಂಧಿ ವೃತ್ತದವರೆಗೆ ಪ್ರಮುಖ ಬೀದಿಯ ಮೂಲಕ ಮುಸ್ಲಿಂ ಸಂಘದ ನೇತೃತ್ವದಲ್ಲಿ ನೂರಾರು ಜನರು ನರಹಂತಕ ಫಯಾಜ್ ವಿರುದ್ಧ ಘೋಷಣೆ ಕೂಗಿದರು.

ನೇಹಾ ಹಿರೇಮಠ್ ಆತ್ಮಕ್ಕೆ ಶಾಂತಿ ಕೋರಿ ಮಾತನಾಡಿದ ಅವರು, ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಜಾತಿಯಾಗಿದ್ದರೂ ಎಲ್ಲರೂ ಮನುಷ್ಯರೇ ಆದರೆ ಹುಬ್ಬಳ್ಳಿಯ ಕಾಲೇಜಿನ ಮುಂಭಾಗದಲ್ಲಿ ಹಾಡು-ಹಗಲೇ ಕೊಲೆಗೈದಿರುವುದು ಇಡೀ ಮನುಕುಲವೇ ತಲೆ ತಗ್ಗಿಸುವ ವಿಚಾರವಾಗಿದೆ. ಇಂತಹ ನರಹಂತಕನಿಗೆ ಯಾವುದೇ ಕೋರ್ಟ್ ಜಾಮೀನು ನೀಡದೇ ಗಲ್ಲು ಶಿಕ್ಷೆಯನ್ನು ವಿಧಿಸಿದರೆ ದೇಶದಲ್ಲಿ ಇಂತಹ ಘಟನೆಗಳು ಮತ್ತೊಮ್ಮೆ ಮರುಕಳಿಸುವುದಿಲ್ಲ. ಕೂಡಲೇ ಇವನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸಾಮೂಹಿಕವಾಗಿ ಒತ್ತಾಯಿಸಿದರು.

**ಜಗಳೂರು**

ಈ ಸಂದರ್ಭದಲ್ಲಿ ಮುಸ್ಲಿಂ ಸಮಾಜದ ಯುವ ಮುಖಂಡ ಹನುಮಂತಾಪುರದ ಬರ್ಕತ್ ಆಲಿ, ಗ್ರಾಪಂ ಮಾಜಿ ಉಪಾಧ್ಯಕ್ಷ ನಜೀರ್ ಅಹಮ್ಮದ್, ಕೋಳಿ ಮುಸ್ತಫಾ, ಷಫೀವುಲ್ಲಾ, ಖಲೀಲ್ ವುಲ್ಲಾ ಖಾನ್, ಹೊನ್ನುರಾಲಿ, ಮಹಾಬುಬ್ ಆಲಿ, ಶೌಕತ್‌ಆಲಿ, ಖಲಂದರ್ ಸಾಬ್, ಜಲೀಲ್ ಬಾಷಾ, ಇನಾಯತ್, ತೌಸೀಫ್, ನೌಷಾದ್ ಆಲಿ, ಯೂಸೂಫ್, ಜಾಕೀರ್, ವಾಸಿಂ, ಬಾಬುಜಾನ್, ಜೆ. ಮಹಾಲಿಂಗಪ್ಪ, ಸತೀಶ್. ಧನ್ಯಕುಮಾರ್ ಸೇರಿದಂತೆ ಮತ್ತಿತರರಿದ್ದರು.


**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ದಾವಣಗೆರೆ.**

**ಸಂಘದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ**

ಮಾನ್ಯ ಷೇರುದಾರರೆ ಮತ್ತು ಗ್ರಾಹಕರೇ,

ನಮ್ಮ ಸಂಘದ ನೂತನ ಕಟ್ಟಡವನ್ನು 3ನೇ ಮುಖ್ಯರಸ್ತೆ, 16ನೇ ತಿರುವು, ಕೆ.ಟಿ.ಜೆ. ನಗರ, ದಾವಣಗೆರೆ ಇಲ್ಲಿ ನಿರ್ಮಿಸಲಾಗಿದ್ದು, ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ದಿ. 25.04.2024ರ ಗುರುವಾರ ಬೆಳಿಗ್ಗೆ 10.30ಕ್ಕೆ ಸಲ್ಲುವ ಶುಭ ಮುಹೂರ್ತದಲ್ಲಿ ಸರಳ ಪೂಜಾ ಸಮಾರಂಭದೊಂದಿಗೆ ನೆರವೇರಿಸಲಾಗುವುದು. ಸಂಘದ ಸದಸ್ಯರು, ಗ್ರಾಹಕರು, ಆತ್ಮೀಯರು ಈ ಶುಭ ಸಂದರ್ಭದಲ್ಲಿ ಹಾಜರಿದ್ದು, ಶುಭ ಹಾರೈಸಬೇಕಾಗಿ ವಿನಂತಿ.

**ತಮ್ಮ ಆಗಮನಾಭಿಲಾಷಿಗಳು ; ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ**


## ಮಾನವೀಯತೆ ಮೆರೆದ ವಿನಯ್



ದಾವಣಗೆರೆ, ಏ. 21 - ರಸ್ತೆ ಬದಿಯಲ್ಲಿ ರಾತ್ರಿ ವೇಳೆ ಅಸಹಾಯಕರಾಗಿ ಕುಳಿತಿದ್ದ ವೃದ್ಧೆಯನ್ನು ವೃದ್ಧಾಶ್ರಮಕ್ಕೆ ಕಳುಹಿಸುವ ಮೂಲಕ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಮಾನವೀಯತೆ ಮೆರೆದಿದ್ದಾರೆ.

ಬ್ಯಾಡಗಿಯ ನಾಗಮ್ಮ ಎಂಬ ವೃದ್ಧೆ ರಸ್ತೆ ಬದಿ ಅಸಹಾಯಕರಾಗಿ ಕುಳಿತಿದ್ದರು. ಒಬ್ಬನೇ ಮಗ ಇದ್ದಾನೆ ಎಂದು ಹೇಳುತ್ತಿದ್ದ ಅಜ್ಜಿಯು ಊಟಕ್ಕೂ ಗತಿ ಇಲ್ಲ. ಮನೆಯಿಂದ ಹೊರ ಬಂದಿದ್ದೇನೆ ಎಂದು ವೃದ್ಧೆ ಅಸಹಾಯಕತೆ ತೋಡಿಕೊಂಡರು. ಅಜ್ಜಿಯ ಮಾತುಗಳನ್ನು ಆಲಿಸಿದ ವಿನಯ್ ಕುಮಾರ್ ಅವರು, ಬಾತಿಯ ತಪೋವನದ ಶಶಿಕುಮಾರ್ ಅವರಿಗೆ ಕರೆ ಮಾಡಿ ಮಾಹಿತಿ ನೀಡಿದರು. ಹರಿಹರದ ಉತ್ತರ ಕಾಲೋನಿಯಲ್ಲಿನ ಆಶ್ರಮಕ್ಕೆ ವೃದ್ಧೆಯನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡಿದ ವಿನಯ್ ಕುಮಾರ್ ಅವರು ಅಜ್ಜಿಗೆ ನೆರವಾದರು. ಈ ವೇಳೆ ಅಜ್ಜಿಯು ವಿನಯ್ ಕುಮಾರ್ ಅವರಿಗೆ ಆಶೀರ್ವಾದ ಮಾಡಿದರಲ್ಲದೇ, ನಿಮ್ಮಂಥವರು ಬೇಕಪ್ಪಾ. ನನ್ನ ಆಶೀರ್ವಾದ ನಿನ್ನ ಮೇಲಿದೆ, ನಿನ್ನ ಸಹಾಯಕ್ಕೆ ಋಣಿಯಾಗಿರುತ್ತೇನೆ ಎಂದು ಮನದುಂಬಿ ಹಾರೈಸಿದರು.

ವೃದ್ಧೆಗೆ ಹೊಸ ಬಟ್ಟೆ, ಊಟ, ಉಳಿದುಕೊಳ್ಳಲು ಎಲ್ಲಾ ವ್ಯವಸ್ಥೆ ಮಾಡಿಕೊಡುವಂತೆ ವಿನಯ್ ಕುಮಾರ್ ಅವರು ಸೂಚನೆ ನೀಡಿದರು.

## ಸಹ್ಯಾದ್ರಿ ಚಿಟ್ಸ್‌ನ ನಗರ ಶಾಖೆಗೆ ವರ್ಷ

ದಾವಣಗೆರೆ, ಏ.21- ಸಹ್ಯಾದ್ರಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್‌ನ ನಗರ ಶಾಖೆಗೆ ಒಂದು ವರ್ಷ ತುಂಬಿದ್ದು, ಶಾಖಾ ಕಚೇರಿಯಲ್ಲಿ ನಡೆದ ಸಂಭ್ರಮೋತ್ಸವದಲ್ಲಿ ಸಂಸ್ಥೆಯ ಚೇರ್ಮನ್ ಬದ್ರಿನಾಥ್ ಮಾತನಾಡಿದರು.

ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಭಟ್, ಶಾಖೆಯ ಮುಖ್ಯಸ್ಥ ಶಿವರಾಜ್ ಉಡುಗಣಿ ಮಾತನಾಡಿದರು.

ಈ ಸಂದರ್ಭದಲ್ಲಿ ನಿರ್ದೇಶಕ ವಿಜಯ್ ಕುಮಾರ್ಬಿ, ಎನ್.ಐ.ನ. ಸದಸ್ಯರಾದ ರಾಘವೇಂದ್ರ ಸಿಂಗ್, ಲಂಬಾಣಿ ಪ್ರವೀಣ್ ಕುಮಾರ್, ಕಿರಣ್ ಕುಮಾರ್ ಹಾಗೂ ಶ್ರೀನಿವಾಸ್ ಡಿ. ಸಿ. ಇತರರು ಹಾಜರಿದ್ದರು.



# ಉಚಿತ ಕೊಡುಗೆಗಳ ಬಗ್ಗೆ ಒಮ್ಮತ: ಸುಬ್ಬರಾವ್ ಸಲಹೆ

ಹೈದರಾಬಾದ್, ಏ. 21 - ರಾಜಕೀಯ ಪಕ್ಷಗಳ ಉಚಿತ ಕೊಡುಗೆಗಳ ಬಗ್ಗೆ ಒಮ್ಮತ ಮೂಡಿಸಲು ಮೋದಿ ಸರ್ಕಾರ ಶ್ವೇತ ಪತ್ರ ಹೊರಡಿಸಬೇಕು ಎಂದು ಆರ್.ಬಿ.ಐ. ಮಾಜಿ ರಾಜ್ಯಪಾಲ ಡಿ. ಸುಬ್ಬರಾವ್ ಸಲಹೆ ನೀಡಿದ್ದಾರೆ.

ಉಚಿತ ಕೊಡುಗೆಗಳಿಗೆ ಸಂಬಂಧಿಸಿದಂತೆ ಸಮಗ್ರ ಚರ್ಚೆಯಾಗಬೇಕಿದೆ. ರಾಜಕೀಯ ಪಕ್ಷಗಳ ಮೇಲೆ ಉಚಿತ ಕೊಡುಗೆಗಳ ಸಂಬಂಧ ನಿರ್ಬಂಧ ಹೇರಬೇಕಿದೆ. ಉಚಿತ ಕೊಡುಗೆಗಳಿಂದ ಆಗುವ ಪರಿಣಾಮಗಳು, ವೆಚ್ಚ ಹಾಗೂ ಲಾಭಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕಿದೆ. ಈ ಬಗ್ಗೆ ಜನರಿಗೆ ತಿಳಿಸುವುದು ಸರ್ಕಾರದ ಹೊಣೆಗಾರಿಕೆ ಎಂದವರು ಹೇಳಿದರು.

ಅಂತಿಮವಾಗಿ ಇದು ರಾಜಕೀಯ ವಿಷಯ ಹಾಗೂ ಈ ಬಗ್ಗೆ ರಾಜಕೀಯ ಒಮ್ಮತ ಮೂಡಬೇಕಿದೆ. ಕೇಂದ್ರ ಸರ್ಕಾರ ಹಾಗೂ ಪ್ರಧಾನ ಮಂತ್ರಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದರಲ್ಲಿ ನೇತೃತ್ವ ವಹಿಸಬೇಕು. ಅವರು ಶ್ವೇತ ಪತ್ರ ಹೊರಡಿಸುವ ಮೂಲಕ ಸರ್ವಸಮ್ಮತಿ ಮೂಡಿಸಬೇಕು ಎಂದು ಸುಬ್ಬರಾವ್ ತಿಳಿಸಿದರು. ಉಚಿತ ಕೊಡುಗೆಗಳಿಂದ ಆಗುವ ಲಾಭ ಹಾಗೂ ನಷ್ಟಗಳ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು ಎಂದ ಅವರು, ಭಾರತದಂತಹ ಬಡ ದೇಶದಲ್ಲಿ ಸರ್ಕಾರಗಳು ದುರ್ಬಲ ವರ್ಗದವರಿಗೆ ಸುರಕ್ಷತೆ ನೀಡಬೇಕು ಎಂದೂ ಹೇಳಿದರು.

# ನಗರ ಪಾಲಿಕೆಯಲ್ಲಿ ರಕ್ತದಾನ ಶಿಬಿರ



ದಾವಣಗೆರೆ, ಏ. 21 - ಮಹಾನಗರ ಪಾಲಿಕೆ ವತಿಯಿಂದ ಮತದಾನ ಜಾಗೃತಿ ಅಭಿಯಾನ ಪ್ರಯುಕ್ತ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಸಹಯೋಗದೊಂದಿಗೆ ರಕ್ತದಾನ ಶಿಬಿರವನ್ನು ಪಾಲಿಕೆ ಆವರಣದಲ್ಲಿ ಆಯೋಜಿಸಲಾಗಿತ್ತು. ಆಯುಕ್ತರಾದ ಶ್ರೀಮತಿ ರೇಣುಕಾ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿದರು. ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಎಸ್.ಆರ್.ಜಗದೀಶ್, ಪಾಲಿಕೆ ವ್ಯವಸ್ಥಾಪಕ ಎಸ್.ಕೆ. ಪಾಂಡುರಾಜ್, ಭರತ್ ಲಿಂಗೇಶ್ ಅವರುಗಳಲ್ಲದೇ, ಇತರರು ರಕ್ತದಾನ ಮಾಡಿದರು.

ಜಿಲ್ಲಾ ನೊಂದಣಾಧಿಕಾರಿ ಇಸ್ಮಾಯಿಲ್, ರೆಡ್ ಕ್ರಾಸ್ ಸಂಸ್ಥೆಯ ಗೌರವ ಅಧ್ಯಕ್ಷ ಗೌಡ್ರ ಚೆನ್ನಬಸಪ್ಪ, ಕಾರ್ಯದರ್ಶಿ ಆನಂದ್ ಜ್ಯೋತಿ, ನಿರ್ದೇಶಕರಾದ ಎ.ಜೆ. ರವಿಕುಮಾರ್, ಶಿವಾನಂದ, ಡಾ. ಬಸವರಾಜ ಪಿ.ಕೆ., ಡಾ. ಪರಶುರಾಮ್ ಮತ್ತು ಸಿಬ್ಬಂದಿ ಹಾಜರಿದ್ದರು.

# ಪದವೀಧರರಿಗೆ ಎನ್.ಇ.ಟಿ., ಪಿ.ಹೆಚ್.ಡಿ.

(1ನೇ ಪುಟದಿಂದ) ತೆರಳಬಹುದು ಎಂದು ವಿಶ್ವವಿದ್ಯಾಲಯಗಳ ಧನ ವಿನಿಯೋಗ ಆಯೋಗ (ಯು.ಜಿ.ಸಿ.) ತಿಳಿಸಿದೆ. ನಾಲ್ಕು ವರ್ಷಗಳಲ್ಲಿ ಸರಾಸರಿ ಕನಿಷ್ಠ ಶೇ.75ರಷ್ಟು ಅಂಕ ಪಡೆದಿರುವವವರಿಗೆ ಈ ಅವಕಾಶ ಲಭ್ಯವಾಗಲಿದೆ ಎಂದು ಯು.ಜಿ.ಸಿ. ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದ್ದಾರೆ.

# ಆತ್ಮಸಾಕ್ಷಿಯಾಗಿ ಮತದಾನದ ಹಕ್ಕು ಚಲಾಯಿಸಿ

## ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ನ್ಯಾ.ರಾಜೇಶ್ವರಿ ಎನ್.ಹೆಗಡೆ



ದಾವಣಗೆರೆ, ಏ. 21 - ಚುನಾವಣೆಯಲ್ಲಿ ಮತದಾನ ಮಾಡುವುದು ನಮ್ಮ ಕರ್ತವ್ಯ, ಇದನ್ನು ನಮ್ಮ ಆತ್ಮಸಾಕ್ಷಿಯಾಗಿ ಮತದಾನ ಮಾಡಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ನಗರದ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಜಿಲ್ಲಾ ವಕೀಲರ ಸಂಘ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ ಇವರ ಸಹಯೋಗದಲ್ಲಿ ಇಂದು ಆಯೋಜಿಸಲಾಗಿದ್ದ ಮತದಾನ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಜಿಲ್ಲೆಯಲ್ಲಿ ಶೇ.100ರಷ್ಟು ಮತದಾನ ಆಗುವುದೇ ಇಲ್ಲ. ಆದರೆ ಕಳೆದ ಬಾರಿ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಅತೀ ಹೆಚ್ಚಿನ ಮತದಾನವಾಗಿದೆ. ಚುನಾವಣೆಗಳಲ್ಲಿ ಈಗ ಮಹಿಳೆಯರು ಹೆಚ್ಚು ಮತದಾನ ಮಾಡುತ್ತಿದ್ದಾರೆ. ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೇ ಜನರು ಮತದಾನ ಮಾಡಬೇಕು. ಆ ಮೂಲಕ ಪ್ರತಿಯೊಬ್ಬ ಭಾರತೀಯರು ತಮ್ಮ ಹಕ್ಕನ್ನು ಚಲಾಯಿಸಬೇಕು ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ದೇಶದ ನಾಯಕರನ್ನು ನಾವೇ ಆಯ್ಕೆ ಮಾಡಿಕೊಳ್ಳಲು ಅಧಿಕಾರ ಇದ್ದು, ನಾಯಕನ ಆಯ್ಕೆಗಾಗಿ ಮೇ 7 ರಂದು ತಪ್ಪದೇ ಮತಗಟ್ಟೆಗೆ ಬಂದು ಮತದಾನ ಮಾಡಿ ಎಂದು ಅವರು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವೆಂಕಟೇಶ.ಎಂ.ವಿ ಮಾತನಾಡಿ, ಇದೊಂದು ಅರ್ಥಪೂರ್ಣವಾದಂತಹ ಕಾರ್ಯಕ್ರಮವಾಗಿದ್ದು, ವಿಶ್ವದಲ್ಲಿ 195 ದೇಶಗಳಿವೆ, ಅದರಲ್ಲಿ ನಮ್ಮ ಭಾರತ ಅತೀ ದೊಡ್ಡದಾದಂತಹ, ಶಕ್ತಿಯುತವಾದ ಪ್ರಜಾಪ್ರಭುತ್ವ ಹೊಂದಿರುವ ದೇಶವಾಗಿದೆ. ಈ ಪ್ರಜಾಪ್ರಭುತ್ವವನ್ನು ನೀಡಿದ್ದು ಜನರೇ ಆಗಿದ್ದು, ಸಂರಕ್ಷಣೆ ಮಾಡುವಂತಹ ಶಕ್ತಿ ಸಂವಿಧಾನಕ್ಕಿದೆ. 75 ವರ್ಷಗಳ ವಿಶ್ವದ ಇತಿಹಾಸ ನೋಡಿದಾಗ ಶೇ. 25 ದೇಶಗಳಲ್ಲಿ ಮಾತ್ರ ಕಾಲ ಕಾಲಕ್ಕೆ ಚುನಾವಣೆ ನಡೆಯುತ್ತಿರುವುದನ್ನು ಕಾಣಬಹುದು. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಪರಿಪೂರ್ಣ ರೀತಿಯಲ್ಲಿ ಅನುಸರಣೆ ಮಾಡುತ್ತಾ ಬರಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ನಿಗದಿತ ಅವಧಿಯಲ್ಲಿ ಚುನಾವಣೆಗಳು ನಡೆದುಕೊಂಡು ಬಂದಿವೆ. ಇದರಿಂದ ಪ್ರಜಾಪ್ರಭುತ್ವದ ಮೌಲ್ಯ, ಶಕ್ತಿ ಹೆಚ್ಚಿದ್ದು, ಇದಕ್ಕೆ ಚುನಾವಣಾ ಮತದಾನವೇ ಕಾರಣವಾಗಿದೆ.

18 ವರ್ಷ ತುಂಬಿದ ಎಲ್ಲಾ ನಾಗರೀಕರಿಗೆ ಮುಕ್ತವಾಗಿ, ಭಯವಿಲ್ಲದೆ ಮತದಾನ ಮಾಡಲು ಸಂವಿಧಾನಿಕ ಹಕ್ಕನ್ನು ನೀಡಲಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಶೇ 72.96 ರಷ್ಟು ಮತದಾನ ಆಗಿದೆ. ಇದು ಶೇ 85ಕ್ಕಿಂತಲೂ ಅಧಿಕವಾಗಬೇಕಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಮಾತನಾಡಿ, ನಮ್ಮ ಇತಿಹಾಸ ನೋಡಿದಾಗ ಸ್ವಾತ್ರಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿ ಯಲ್ಲಿದ್ದವರೂ ವಕೀಲರು. ಇವರು ಸ್ವಾತಂತ್ರ್ಯ ಹೋರಾಟಗಳಲ್ಲಿ ನೇತೃತ್ವ ವಹಿಸಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು. ನಂತರದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಕಾನೂನು ತಜ್ಞರು, ವಕೀಲರ ಸಹಕಾರದಿಂದ ನಾವು ಒಳ್ಳೆಯ ಸಂವಿಧಾನವನ್ನು ಹೊಂದಲು ಹಾಗೂ ಪ್ರಜಾಪ್ರಭುತ್ವನ್ನು ಗಟ್ಟಿಗೊಳಿಸಲು ಕಾರಣೀಭೂತರಾಗಿದ್ದಾರೆ.

ಚುನಾವಣೆಯಲ್ಲಿ ಮತದಾರರಿಗೆ ಜಾಗೃತಿ ಮೂಡಿಸಲು ಎಲ್ಲರೂ ಸೇರಿ ಮತದಾನ ಹೆಚ್ಚಳದ ಕಾರ್ಯದಲ್ಲಿ ಭಾಗಿಯಾಗಬೇಕಾಗಿದೆ. ದಾವಣಗೆರೆ ನಗರ, ಹೊನ್ನಾಳಿ, ಹರಿಹರ ಮತ್ತು ಚನ್ನಗಿರಿ ಪಟ್ಟಣಗಳಲ್ಲಿನ ಮತಗಟ್ಟೆಗಳಲ್ಲಿ ಕಡಿಮೆ ಮತದಾನವಾಗಿದೆ. ಜಿಲ್ಲೆಯಲ್ಲಿನ ಒಟ್ಟು 1693 ಮತಗಟ್ಟೆಗಳ ಪೈಕಿ ಕಳೆದ ಚುನಾವಣೆಯಲ್ಲಿ 135 ಮತಗಟ್ಟೆಗಳಲ್ಲಿ ಅತೀ ಕಡಿಮೆ ಮಟ್ಟದ ಮತದಾನವಾಗಿದೆ. ಭಾಷಾನಗರ, ಪೋಲೀಸ್ ಕ್ವಾರ್ಟರ್ಸ್, ನಿಟ್ಟುವಳ್ಳಿ ಈ ಭಾಗದಲ್ಲಿ ಮತದಾನ ಕಡಿಮೆಯಾಗಿದೆ ಎಂದರು.

ವಕೀಲರ ಬಳಿ ಬರುವ ಕಕ್ಷಿದಾರರಿಗೆ, ಜೊತೆಯಲ್ಲಿ ಬರುವವರಿಗೂ ಮತದಾನ ಮಾಡಲು ಪ್ರೇರೇಪಿಸಲು ಮತ್ತು ಮತಗಟ್ಟೆ, ಕ್ರಮಸಂಖ್ಯೆ ಸೇರಿದಂತೆ ಮತ ಪಟ್ಟಿ ವಿವರ ಪಡೆಯಲು ವಿಹೆಚ್‌ಎ ಆಪ್ ಡೌನ್‌ಲೋಡ್ ಮಾಡಿಕೊಳ್ಳಲು ತಿಳಿಸಿದರು.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ವಿ.ವಿಜಯಾನಂದ್ ಮತದಾನದ ಪ್ರತಿಜ್ಞಾ ವಿಧಿ ಬೋಧಿಸಿದರು.

ಮರಣ ಹೊಂದಿದ ವಕೀಲರಾದ ಕೊಟ್ರಯ್ಯನವರ ಪತ್ನಿ ಪುಷ್ಪಲತಾ ಅವರಿಗೆ 1 ಲಕ್ಷ ರೂ.ಗಳ ಪರಿಹಾರದ ಚೆಕ್ ವಿತರಣೆ ಮಾಡಲಾಯಿತು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್ ಅರುಣಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ದಿನಾಚರಣೆಯ ಪ್ರಯುಕ್ತ ಅಪರ ಜಿಲ್ಲಾಧಿಕಾರಿ ಸೈಯ್ಯದಾ ಅಫ್ರಿನ್ ಭಾನು. ಎಸ್ ಬಳ್ಳಾರಿ, ಪಾಲಿಕೆ ಆಯುಕ್ತರಾದ ರೇಣುಕಾ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ದಶರಥ, ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಪಾದ, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಬಸವರಾಜ್ ಗೋಪನಾಳ್, ಕಾರ್ಯದರ್ಶಿ ಎಸ್. ಬಸವರಾಜ್, ಸಹ ಕಾರ್ಯದರ್ಶಿ ಮಂಜುನಾಥ ಮತ್ತು ಇತರರು ಉಪಸ್ಥಿತರಿದ್ದರು.

# ಮುಸ್ಲಿಮರಿಗೆ ಆಸ್ತಿ ಹಂಚಲಿದೆ

(1ನೇ ಪುಟದಿಂದ) ಪಕ್ಷದ ಪ್ರಣಾಳಿಕೆಯಲ್ಲಿನ ಅಂಶ ಗಂಭೀರ ಹಾಗೂ ಚಿಂತೆ ತರುವಂಥದ್ದಾಗಿದೆ. ಅವರು ಮಾವೋವಾದಿಗಳ ಸಿದ್ಧಾಂತ ಜಾರಿಗೆ ತರಲು ಪ್ರಯತ್ನ ನಡೆಸಿದ್ದಾರೆ. ಕಾಂಗ್ರೆಸ್ ತೊರೆದು ಬಂದ ನಾಯಕರು ಈ ವಿಷಯ ತಿಳಿಸಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಪ್ರತಿಯೊಬ್ಬರ ಆಸ್ತಿ ಸಮೀಕ್ಷೆ ನಡೆಸುವುದಾಗಿ ಹೇಳುತ್ತಿದೆ. ನಮ್ಮ ಸಹೋದರಿಯರ ಬಳಿ ಇರುವ ಬಂಗಾರದ ತನಿಖೆ ಮಾಡಲಾಗುವುದು ಹಾಗೂ ಲೆಕ್ಕ ಹಾಕಲಾಗುವುದು. ಬುಡಕಟ್ಟು ಕುಟುಂಬಗಳ ಬಳಿ ಇರುವ ಬೆಳ್ಳಿ ಲೆಕ್ಕ ಹಾಕಲಾಗುವುದು. ಈ ಬಂಗಾರ ಹಾಗೂ ಇತರೆ ಆಸ್ತಿಗಳನ್ನು ಸಮಾನವಾಗಿ ಹಂಚಲಾಗುವುದು. ಇದು ನಿಮಗೆ ಒಪ್ಪಿಗೆ ಇದೆಯೇ? ನೀವು ಕಷ್ಟಪಟ್ಟು ದುಡಿದಿರುವ ಆಸ್ತಿಯನ್ನು ಕಬಳಿಸಲು ಸರ್ಕಾರಕ್ಕೆ ಹಕ್ಕಿದೆಯೇ? ನಮ್ಮ ತಾಯಂದಿರು ಹಾಗೂ ಸಹೋದರಿಯರ ಬಳಿ ಇರುವ ಬಂಗಾರ ಕೇವಲ ಪ್ರದರ್ಶನಕ್ಕಲ್ಲ, ಅದು ಅವರ ಆತ್ಮಗೌರವ ಎಂದೂ ಮೋದಿ ಹೇಳಿದರು.

ಮಹಿಳೆಯರ ಮಂಗಳಸೂತ್ರದ ಮೌಲ್ಯ ಬಂಗಾರದಲ್ಲಿ ಇಲ್ಲ, ಅವರು ಅವರ ಜೀವನದ ಕನಸುಗಳಿಗೆ ಸಂಬಂಧಿಸಿದ್ದು. ಇದನ್ನು ಕಸಿಯುವ ಮಾತನಾಡಲಾಗುತ್ತಿದೆ. ಕಾಂಗ್ರೆಸ್ ಈಗ ನಗರ ನಕ್ಸಲರ ಹಿಡಿತಕ್ಕೆ ಸಿಲುಕಿದೆ ಎಂದು ಮೋದಿ ಟೀಕಿಸಿದರು.

# ಆರೋಗ್ಯ ಪಾಲಿಸಿ ವಯೋಮಿತಿ ತೆರವು

(1ನೇ ಪುಟದಿಂದ) ಬರಲು ಅನುಕೂಲವಾಗಲಿದೆ.

ಈ ಹಿಂದಿನ ಮಾರ್ಗಸೂಚಿಗಳಲ್ಲಿ 65 ವರ್ಷದ ಒಳಗಿನವರು ಮಾತ್ರ ಹೊಸ ವಿಮಾ ಪಾಲಿಸಿ ಪಡೆಯಬಹುದಿತ್ತು. ಹೊಸ ಮಾರ್ಗಸೂಚಿ ಏಪ್ರಿಲ್ 1ರಿಂದ ಜಾರಿಯಾಗಿದ್ದು, ಯಾವ ವಯಸ್ಸಿನವರು ಬೇಕಾದರೂ ಹೊಸ ಪಾಲಿಸಿ ಪಡೆಯಬಹುದು.

ಹಿರಿಯ ನಾಗರಿಕರು, ವಿದ್ಯಾರ್ಥಿಗಳು, ಗರ್ಭಿಣಿಯರು ಹಾಗೂ ಇತರೆ ಗುಂಪಿನವರಿಗೆ ವಿಮಾ ಉತ್ಪನ್ನಗಳನ್ನು ರೂಪಿಸಬಹುದು ಎಂದು ಐ.ಆರ್.ಡಿ.ಎ.ಐ. ತಿಳಿಸಿದೆ.

# ಮಾಗನೂರು ಬಸಪ್ಪ ಕಾಲೇಜಿಗೆ ಶೇ.99.48 ಫಲಿತಾಂಶ



ದಾವಣಗೆರೆ, ಏ. 21- ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1 ರಲ್ಲಿ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಕು. ಕವನ ಎಲ್.ಎ ವಿಜ್ಞಾನ ವಿಭಾಗದಲ್ಲಿ 600 ಅಂಕಗಳಿಗೆ 585 ಅಂಕಗಳನ್ನು ಗಳಿಸುವ ಮೂಲಕ ಕಾಲೇಜು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

ಕು. ವರ್ಷ ಕೆ.ಎಂ 577 ಅಂಕಗಳನ್ನು ಗಳಿಸಿ ಕಾಲೇಜಿಗೆ ದ್ವಿತೀಯ ಸ್ಥಾನವನ್ನು, ಕು. ಶ್ರೇಯ ಎಸ್.ಹೆಚ್ 575 ಅಂಕಗಳನ್ನು ಗಳಿಸಿ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.

ಈ ವರ್ಷ ಕಾಲೇಜಿನಿಂದ 196 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದು, 195 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಕಾಲೇಜಿಗೆ ಶೇ.99.48 ಫಲಿತಾಂಶ ಬಂದಿರುತ್ತದೆ. 96 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದು, 07 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಗಳಿಸಿರುತ್ತಾರೆ.

# ಸೂಚಕರ ಸಹಿಯಲ್ಲಿ ಲೋಪ : ಸೂರತ್ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ತಿರಸ್ಕೃತ

ಸೂರತ್, ಏ. 21 - ಸೂಚಕರ ಸಹಿಯಲ್ಲಿ ಲೋಪಗಳು ಕಂಡು ಬಂದ ಹಿನ್ನೆಲೆಯಲ್ಲಿ ಗುಜರಾತ್‌ನ ಸೂರತ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ನೀಲೇಶ್ ಕುಂಭನಿ ಅವರ ನಾಮಪತ್ರವನ್ನು ತಿರಸ್ಕರಿಸಲಾಗಿದೆ.

ಕಾಂಗ್ರೆಸ್‌ನ ಹೆಚ್ಚುವರಿ ಅಭ್ಯರ್ಥಿ ಸುರೇಶ್ ಪಡಸಾಲಾ ಅವರ ನಾಮಪತ್ರವನ್ನೂ ಅಸಿಂಧುಗೊಳಿಸಲಾಗಿದೆ.

ಈ ಬಗ್ಗೆ ಆದೇಶ ಹೊರಡಿಸಿರುವ ಚುನಾವಣಾ ಅಧಿಕಾರಿ ಸೌರಭ್ ಪರ್ಧಿ, ಕುಂಭನಿ ಹಾಗೂ ಪಡಸಾಲ ಸಲ್ಲಿಸಿದ್ದ ನಾಲ್ಕು ಸೆಟ್ ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ. ಸೂಚಕರ ಸಹಿಯಲ್ಲಿ ಲೋಪಗಳಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಹಾಗೂ ಇವು ಅಸಲಿ ಸಹಿಯಂತೆ ಕಂಡು ಬರುತ್ತಿಲ್ಲ ಎಂದಿದ್ದಾರೆ.

ಈ ನಾಮಪತ್ರ ಅರ್ಜಿಗಳಿಗೆ ನಾವು ಸಹಿ ಹಾಕಿಲ್ಲ ಎಂದು ಸೂಚಕರು ಪ್ರಮಾಣ ಪತ್ರಗಳ ಮೂಲಕ ತಿಳಿಸಿದ್ದಾರೆ ಎಂದೂ ಆದೇಶದಲ್ಲಿ ಹೇಳಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪಕ್ಷದ ವಕೀಲ ಬಾಬು ಮಂಗುಕಿಯ, ಈ ಬಗ್ಗೆ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಗಳಲ್ಲಿ ಅರ್ಜಿ ಸಲ್ಲಿಸಲಾಗುವುದು ಎಂದಿದ್ದಾರೆ.

ಬಿಜೆಪಿ ಅಭ್ಯರ್ಥಿ ಮುಕೇಶ್ ದಲಾಲ್ ಅವರು ನಾಮಪತ್ರಗಳಿಗೆ ಶನಿವಾರ ಆಕ್ಷೇಪಣೆ ದಾಖಲಿಸಿದ್ದರು. ನಂತರ ಕಾಂಗ್ರೆಸ್ ಅಭ್ಯರ್ಥಿ ತನ್ನ ಎದುರು ವಿವರ ನೀಡಲು ಚುನಾವಣಾ ಅಧಿಕಾರಿ ಸಮಯ ನೀಡಿದ್ದರು.

ಸೂಚಕರು ನನ್ನ ಉಪಸ್ಥಿತಿಯಲ್ಲೇ ನಾಮಪತ್ರ ಸಲ್ಲಿಸಿದ್ದಾರೆ. ಈ ಬಗ್ಗೆ ಪರಿಣಿತರಿಂದ ಪರೀಕ್ಷೆ ನಡೆಸಬೇಕು. ಸೂಚಕರ ವಿಚಾರಣೆ ನಡೆಸಬೇಕು ಎಂದು ಕಾಂಗ್ರೆಸ್ ಅಭ್ಯರ್ಥಿ ಕುಂಭನಿ ಹೇಳಿದ್ದರು.

ಆದರೆ, ಸೂಚಕರು ನಾವು ಸಹಿ ಹಾಕಿಲ್ಲ ಎಂದು ಪ್ರಮಾಣ ಪತ್ರ ಸಲ್ಲಿಸಿದ್ದಾರೆ. ತಮ್ಮ ಮೇಲೆ ಯಾವುದೇ ಬೆದರಿಕೆ ಇಲ್ಲವೇ ಒತ್ತಡ ಇಲ್ಲ ಎಂದೂ ತಿಳಿಸಿದ್ದಾರೆ ಎಂದು ಚುನಾವಣಾ ಅಧಿಕಾರಿ ಹೇಳಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಪರ ವಕೀಲರ ಮನವಿಯ ಮೇರೆಗೆ ನಾಮಪತ್ರದ ವಿಡಿಯೋ ಸಹ ಪರಿಶೀಲಿಲಾಗಿದೆ. ಇದರಲ್ಲೂ ಸೂಚಕರು ಕಂಡು ಬಂದಿಲ್ಲ ಎಂದು ಆದೇಶದಲ್ಲಿ ಹೇಳಲಾಗಿದೆ.

ಈ ನಡುವೆ ಹೇಳಿಕೆ ನೀಡಿರುವ ಗುಜರಾತ್ ಕಾಂಗ್ರೆಸ್ ಅಧ್ಯಕ್ಷ ಶಕ್ತಿಸಿನ್ಹ ಗೋಹಿಲ್, ಸೋಲಿನಿಂದ ವಿಚಲಿತವಾಗಿರುವ ಬಿಜೆಪಿಯ ಪರವಾಗಿ ನಾಮಪತ್ರ ತಿರಸ್ಕರಿಸಲಾಗಿದೆ. ಇದು ಪ್ರಜಾಪ್ರಭುತ್ವದ ಹತ್ಯೆ ಎಂದು ಆರೋಪಿಸಿದ್ದಾರೆ.

ಸೂಚಕರು ಸಹಿ ತಮ್ಮದಲ್ಲ ಎಂದು ಹೇಳಿದ್ದಾರೆ ಎಂಬ ಏಕೈಕ ಕಾರಣಕ್ಕೆ ನಾಮಪತ್ರ ತಿರಸ್ಕರಿಸಲಾಗದು ಎಂದೂ ಅವರು ಹೇಳಿದ್ದಾರೆ.

# ಇನ್ಸುಲಿನ್ ನೀಡದೇ ಕೇಜ್ರಿವಾಲ್ ಹತ್ಯೆಗೆ ಸಂಚು : ಸುನೀತಾ

ರಾಂಚಿ, ಏ. 21 - ಬಂಧನದಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಹತ್ಯೆಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಸಂಚು ನಡೆಸಿದೆ. ಅವರಿಗೆ ಇನ್ಸುಲಿನ್ ನೀಡುತ್ತಿಲ್ಲ ಎಂದು ಪತ್ನಿ ಸುನೀತಾ ಕೇಜ್ರಿವಾಲ್ ಆರೋಪಿಸಿದ್ದಾರೆ.

ಕೇಜ್ರಿವಾಲ್ ಸಕ್ಕರೆ ಕಾಯಿಲೆ ಹೊಂದಿದ್ದಾರೆ. ಅವರು 12 ವರ್ಷಗಳಿಂದ ಇನ್ಸುಲಿನ್ ಪಡೆಯುತ್ತಿದ್ದಾರೆ ಎಂದು ಸುನೀತಾ ಅವರು ರಾಂಚಿಯಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಹೇಳಿದ್ದಾರೆ.

ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮಾರ್ಚ್ 21ರಂದು ಕೇಜ್ರಿವಾಲ್‌ರನ್ನು ಬಂಧಿಸಿತ್ತು.

# ರಾಘವೇಂದ್ರ ಹೈಟೆಕ್ ಕಾಲೇಜಿಗೆ ಶೇ.99.2 ಫಲಿತಾಂಶ



ದಾವಣಗೆರೆ, ಏ. 21 - ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ರಾಘವೇಂದ್ರ ಹೈಟೆಕ್ ಪದವಿ ಪೂರ್ವ ಕಾಲೇಜಿಗೆ ಶೇ. 99.2 ಫಲಿತಾಂಶ ಬಂದಿದೆ.

ವಿಜ್ಞಾನ ವಿಭಾಗದಿಂದ 123 ವಿದ್ಯಾರ್ಥಿಗಳಲ್ಲಿ 74 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 47 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಕೆ.ಎಂ. ಸಿಂಚನ 600 ಕ್ಕೆ 589 ಅಂಕಗಳನ್ನು ಪಡೆಯುವ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಎಸ್. ಸಾಗರ್ 586, ಎಂ.ಎಂ.ಪೂಜಾ 584, ಪಿ.ಕಿರಣ್ ಕುಮಾರ್ 582, ಕೀರ್ತನ ನಾಗನಗೌಡ 580 ಅಂಕಗಳನ್ನು ಪಡೆದುಕೊಂಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ 5 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 15 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಹೆಚ್.ಟಿ. 560, ಕೆ.ಆರ್. ವರ್ಷಿಣಿ 556, ಡಿ.ಹೆಚ್. ಐಶ್ವರ್ಯ 543 ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಕಾಲೇಜಿನ ಪ್ರಾಚಾರ್ಯ ಡಾ. ಅನಿಲ್ ಕುಮಾರ್ ಶ್ಯಾಗಲೆ ಹಾಗೂ ಉಪನ್ಯಾಸಕ ವರ್ಗದವರು ಅಭಿನಂದಿಸಿದ್ದಾರೆ.

# ಬಾಪೂಜಿ ಆಸ್ಪತ್ರೆಯಲ್ಲಿ ಕೂದಲು ಉದುರುವಿಕೆ ತಡೆ ಕಾರ್ಯಾಗಾರ



ದಾವಣಗೆರೆ, ಏ. 21 - ನಗರದ ಜೆ.ಜೆ.ಎಂ. ಮೆಡಿಕಲ್ ಕಾಲೇಜು ಹಾಗೂ ಎಸ್.ಎಸ್.ಐ.ಎಂ.ಎಸ್ ಕಾಲೇಜು ಚರ್ಮರೋಗ ವಿಭಾಗದಿಂದ 'ಹೇರ್ ಮೆಸೊಥೆರಪಿ' (ಕೂದಲು ಉದುರುವಿಕೆ ತಡೆ) ಕಾರ್ಯಾಗಾರ ಇತ್ತೀಚೆಗೆ ನಡೆಯಿತು.

ಜೆಜೆಎಂ ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ. ಶುಕ್ಲಾಶೆಟ್ಟಿ ಕಾರ್ಯಾಕಾರ ಉದ್ಘಾಟಿಸಿದರು.

ಕೂದಲು ಉದುರುವಿಕೆಗೆ ವಿವಿಧ ಕಾರಣಗಳ ಬಗ್ಗೆ ಡಾ. ಮಧು ಎಂ. ಉಪನ್ಯಾಸ ನೀಡಿದರು.

ಕೂದಲು ಪುನರ್‌ಸ್ಥಾಪನೆ ಕುರಿತು ಡಾ. ಅರ್ಪಿತಾ ಡಿ. ಪವಾಡ ಶೆಟ್ಟರ್ ಮಾತನಾಡಿದರು.

ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಸೂಗಾರೆಡ್ಡಿ, ಡಾ. ಬಿ.ಕೆ. ವಿಶ್ವನಾಥ್, ಡಾ. ನಾಡಿಗ ರಾಜಶೇಖರ್, ಡಾ.ಮಂಗಳ ಎಚ್.ಸಿ., ಡಾ. ಲಿಂಗರಾಜ್ ಎಂ.ಎಂ., ಡಾ.ರೂಪ ಎಂ.ಸಿ. ಡಾ. ಸೌಮ್ಯ ಮಾನಂಗಿ, ಡಾ.ರಶ್ಮಿ ಎ.ಬಿ., ಡಾ.ವಿನಯ್ ಡಿ.ಜಿ, ಡಾ.ಮಧು ಎಂ. ರವರ ನೇತೃತ್ವದೊಂದಿಗೆ ಕಾರ್ಯಾಗಾರ ಆಯೋಜಿಸಲಾಗಿತ್ತು.

ಚರ್ಮ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳು, ಕಿರಿಯ ವೈದ್ಯರುಗಳು ಭಾಗವಹಿಸಿದ್ದರು.

# ಸಂವಿಧಾನದ ಹಿಂದಿನ ದೊಡ್ಡ ಶಕ್ತಿ ಅಂಬೇಡ್ಕರ್

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ಪಿ.ಎಸ್.ಐ. ಶಂಭುಲಿಂಗ ಸಿ. ಹಿರೇಮಠ

ಹರಪನಹಳ್ಳಿ, ಏ. 21 - ದೇಶದ ಪ್ರತಿಯೊಬ್ಬರ ಪಾಲಿನ ಪವಿತ್ರ ಗ್ರಂಥವಾದ ಸಂವಿಧಾನದ ಹಿಂದಿನ ದೊಡ್ಡ ಶಕ್ತಿ ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಪಿ.ಎಸ್.ಐ. ಶಂಭುಲಿಂಗ ಸಿ.ಹೀರೆಮಠ್ ಹೇಳಿದರು.

ಪಟ್ಟಣದ ಬಾಪೂಜಿ ನಗರದಲ್ಲಿ ಭಾನುವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ



133ನೇ ಜನ್ಮ ದಿನಾಚರಣೆ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮವಾದ ತಾಲ್ಲೂಕು ಸಮಿತಿ ಹಾಗೂ 5ನೇ ವಾರ್ಡ್ ಬಾಪೂಜಿ ನಗರದ ದೈವಸ್ಥರ ವತಿಯಿಂದ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ನಂತರ ಅವರು ಮಾತನಾಡಿ, ಅಂಬೇಡ್ಕರ್ ಅವರ ಬದುಕು ಎಲ್ಲರಿಗೂ ಸ್ಪೂರ್ತಿ, ಸಮಾನತೆ, ಪ್ರಗತಿಯ ಕನಸು ಕಂಡ ಮೇರು ನಾಯಕ ನಮ್ಮ ಹೆಮ್ಮೆಯ ಸಂವಿಧಾನ ಶಿಲ್ಪಿ. ಇವರ ಆದರ್ಶ ಎಲ್ಲರ ಜೀವನಕ್ಕೆ ದಾರಿ. ಸಂವಿಧಾನದ ಅಡಿಯಲ್ಲಿ ನಾವು-ನೀವು ಎಲ್ಲರೂ ಕೆಲಸ ಮಾಡುವ ಹಾಗೆ ಮಾಡಿದ್ದು, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ತಿಳಿಸಿದರು.

ಪುರಸಭೆ ಸದಸ್ಯ ಎಚ್.ಎಂ.ಅಶೋಕ ಹರಾಳ್ ಮಾತನಾಡಿ, ಮಹಿಳೆಯರಿಗೆ ಚುನಾವಣೆ ವೇಳೆ ಮತದಾನ ಮಾಡುವ ಹಕ್ಕನ್ನು ತಂದು ಕೊಟ್ಟವರು. ಅಧಿಕಾರದ ಹಂಚಿಕೆ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಿಗುವಂತಾಗಬೇಕು. ಸಮಾಜದಲ್ಲಿ ಅತ್ಯಂತ ನೋವು, ದುಃಖ, ಅಪಮಾನದಿಂದ ಬದುಕುವ ಸರ್ವ ಜನಾಂಗದ ವರಿಗೆ ತನ್ನ ಜೀವನದ ಸಾಧನೆಯನ್ನು ಅರ್ಪಣೆ ಮಾಡಿದ ಮಹಾನ್ ಚೇತನ ಎಂದು ಹೇಳಿದರು.

ನಿವೃತ್ತ ಶಿಕ್ಷಕ ಎ.ಕೆ.ಹುಚ್ಚಪ್ಪ ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಕೊಡುಗೆಗಳು ಶೋಷಿತರಿಗೆ ಮಾತ್ರ ಸೀಮಿತವಾಗಿಲ್ಲ. ಮಹಿಳಾ ಸಮಾನತೆ, ಕಾರ್ಮಿಕ ಹಕ್ಕುಗಳು, ಅಲ್ಪಾಸಂಖ್ಯಾತರ ರಕ್ಷಣೆಗೆ ಅವರು ನೀಡಿದ ಕೊಡುಗೆಗಳು ಅಪಾರವಾಗಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದು ಪಾಸಾದ ಬಾಪೂಜಿ ನಗರದ ವಿದ್ಯಾರ್ಥಿಗಳಾದ ಅಳಗಂಚಿಕೇರಿ ಪ್ರಜ್ವಲ್, ಅಳಗಂಚಿಕೇರಿ ಸಂಜನಾ, ಬಂಗಿ ಲಕ್ಷ್ಮಿ, ಡಿ.ಅಶ್ವಿನಿ, ಕೆ. ಮನೋಜ, ಕೆ.ಮುರುಳಿ, ಅಳಗಂಚಿಕೇರಿ ಆಕಾಶ್ ಸೇರಿದಂತೆ ಅನೇಕ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮವಾದ ಅಧ್ಯಕ್ಷ ಕೆ.ಸುಭಾಶ್ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಕೇರಿಯ ದೈವಸ್ಥರಾದ ಅಳಗಂಚಿಕೇರಿ ನಿಂಗಪ್ಪ, ಪೂಜಾರ್ ನಾಗೇಂದ್ರಪ್ಪ, ಸಿ.ಚಂದ್ರಪ್ಪ, ಅಳಗಂಚಿಕೇರಿ ರಾಮಪ್ಪ, ಬಿ.ಎಚ್.ನಿಂಗಪ್ಪ, ಗುಂಡಗತ್ತಿ ಕೊಟ್ರಪ್ಪ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಾವಾದ ಸಂಘದ ಅಧ್ಯಕ್ಷ ಕೆ. ಸುಭಾಶ್, ಉಪಾಧ್ಯಕ್ಷ ಸಿ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಪೂಜಾರ್ ಮಲ್ಲಿಕಾರ್ಜುನ್, ರಿಯಾಜ್, ಖಾಜಾಸಾಬ್, ಸೈಯದ್ ಇರ್ಫಾನ್, ನಾಲಬಂದ್ ಭಾಷ್, ಪೂಜಾರ್ ನಿಂಗಪ್ಪ, ಬಿ.ಮಹೇಂದ್ರ ಕುಮಾರ್, ಹೆಗ್ಗಪ್ಪರ ಸುರೇಶ್, ಜಿ.ಶ್ರೀಕಾಂತ್, ಸವಣೂರ್ ಯಲ್ಲಪ್ಪ, ಮಾಳಗಿ ರಮೇಶ್, ಆರ್.ಕೋಟೆಪ್ಪ, ಭಂಗಿ ಚಂದ್ರಪ್ಪ, ಕೆ.ಕೋಟೇಪ್ಪ, ಬಿ.ಮುತ್ತಪ್ಪ, ಅಂಬಳಿ ನಾಗರಾಜ, ಡಿ.ಮೈಲಾರಿ, ಭಂಗಿ ಮೂಕಪ್ಪ, ಅಂಜಿನಪ್ಪ, ಪೂಜಾರ್ ಕೆಂಚಪ್ಪ, ಛತ್ರಪತಿ, ಕೆ. ಭರತ್ ಸೇರಿದಂತೆ, ಅನೇಕರು ಭಾಗವಹಿಸಿದ್ದರು.

# ಸಂಸದರ ನಡೆಗೆ ಬೇಸತ್ತು ಕಾಂಗ್ರೆಸ್ ಸೇರ್ಪಡೆ

## ನಾಳೆ ಎಸ್ಸೆಸ್-ಎಸ್ಸೆಸ್ಸೆಂ ನೇತೃತ್ವದಲ್ಲಿ ವಿಧ್ಯುಕ್ತವಾಗಿ ಸೇರ್ಪಡೆ: ಹೆಚ್.ಎಸ್. ನಾಗರಾಜ್

ದಾವಣಗೆರೆ, ಏ.21- ಸಂಸದ ಜಿ.ಎಂ. ಸಿದ್ದೇಶ್ವರ ಅವರ ನಡೆಗೆ ಬೇಸತ್ತು ಕಾಂಗ್ರೆಸ್ ಸೇರುತ್ತಿರುವುದಾಗಿ ಯುವ ಮುಖಂಡ ಹೆಚ್.ಎಸ್. ನಾಗರಾಜ್ ಹೇಳಿದ್ದಾರೆ.

ನಗರದ ಚೇತನಾ ಹೋಟೆಲ್ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ನಾಡಿದ್ದು ದಿನಾಂಕ 23ರ ಮಂಗಳವಾರ ಬೆಳಿಗ್ಗೆ 11ಕ್ಕೆ ರೇಣುಕ ಮಂದಿರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಅವರ ಸಮಕ್ಷಮದಲ್ಲಿ ವಿಧ್ಯುಕ್ತವಾಗಿ ಕಾಂಗ್ರೆಸ್ ಸೇರ್ಪಡೆ ಆಗುತ್ತಿದ್ದೇನೆ. ಈ ವೇಳೆ ವಿವಿಧ ತಾಲ್ಲೂಕು ಮುಖಂಡರು ಸಹ ಸೇರಲಿದ್ದಾರೆ ಎಂದರು.

2009ರಲ್ಲಿ ನಾನು ಬಿಜೆಪಿ ಸೇರುವಾಗ ಭಾರೀ ಸ್ವಾಗತ ಕೋರಿದ್ದರು. ಈಗ ಅವರಿಗೆ ಶಿವಪ್ಪನವರ ಒಬ್ಬ ಮಗ ಬೇಕಾಗಿದ್ದಾನೆ. ಇನ್ನೊಬ್ಬ ಮಗ ನಾನು ಬೇಡವಾಗಿದ್ದೇನೆ. ಹೀಗೆ ಕುಟುಂಬದಲ್ಲೇ ಒಡಕುಂಟು ಮಾಡಿರುವ ಅವರು ನನಗೆ ವೈಯಕ್ತಿಕವಾಗಿ ಬಹಳ ನೋವು ನೀಡಿದ್ದಾರೆ ಎಂದು ತಿಳಿಸಿದರು.



ಕಾರ್ಮಿಕರು ಹಾಗೂ ರೈತರ ಅನುಕೂಲಕ್ಕಾಗಿ ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ ಪುನಶ್ಚೇತನ ಮಾಡುವುದಾಗಿ ಭರವಸೆ ನೀಡಿ ಮಾತು ತಪ್ಪಿದರು. ನಂತರ ತಾವೇ ಕಾರ್ಖಾನೆ ಖರೀದಿಗೆ ಮುಂದಾದರು ಎಂದು ನಾಗರಾಜ್ ಆರೋಪಿಸಿದರು.

ನಾನು ಯಾವುದೇ ಷರತ್ತು ಇಲ್ಲದೇ ಕಾಂಗ್ರೆಸ್ ಸೇರುತ್ತಿದ್ದೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ನಾಗರಾಜ್, ಯಾವುದೇ ಜವಾಬ್ದಾರಿಯನ್ನು ಪಕ್ಷ ನೀಡಿದರೆ ಅದನ್ನು ನಿಭಾಯಿಸುತ್ತೇನೆ ಎಂದು ತಿಳಿಸಿದರು.

ಪಕ್ಷ ಬಿಟ್ಟು ಹೋಗುವವರು ಪಕ್ಷ ವಿರೋಧಿಗಳು ಎಂದು ಹೇಳುತ್ತಾರೆ. ಆದರೆ ಬಿಜೆಪಿ ಸಂಸದನಾಗಿ ಸಿದ್ದೇಶ್ವರ ಅವರು ಕೆಜೆಪಿ (ಕರ್ನಾಟಕ ಜನತಾ ಪಕ್ಷ)ಯ ಟಿಕೆಟ್ ಹಂಚಿರುವುದು ನನಗೆ ಗೊತ್ತಿದೆ. ಸಿಕ್ಕ ಸಿಕ್ಕವರನ್ನು ಉಚ್ಚಾಟನೆ ಮಾಡುವ ನೀವೆಷ್ಟು ಪ್ರಾಮಾಣಿಕರಾಗಿದ್ದೀರಿ? ಎಂದು ಪ್ರಶ್ನಿಸಿದರು.

ಸಂಸದರು ಸ್ವಂತ ಅಭಿವೃದ್ಧಿಗೆ ನಿಂತಿದ್ದಾರೆ. ತಾವು ಅಧಿಕಾರ ಅನುಭವಿಸುತ್ತಾ ಉಳಿದವರಿಗೆ ನೋವು ಕೊಡುವ ಕೆಲಸ ಮಾಡುತ್ತಿದ್ದಾರೆ. ನಮ್ಮಂತವರನ್ನು ಬಳಸಿ ಬಿಸಾಕುವ ನಿಮಗೆ ಮತದಾರರು ಉತ್ತರಿಸಲಿದ್ದಾರೆ ಎಂದರು.

ಶಾಮನೂರು ಶಿವಶಂಕರಪ್ಪನವರು ಜಿಲ್ಲೆಯ ಪಿತಾಮಹ. ಎಸ್.ಎಸ್. ಮಲ್ಲಿಕಾರ್ಜುನ್ ಅವರು ಅಭಿವೃದ್ಧಿಯ ಹರಿಕಾರ. ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಸಾಕ್ಷಾತ್ ಅನ್ನಪೂರ್ಣೆಯಂತೆ ಕಾಣಿಸುತ್ತಾರೆ. ಅವರನ್ನು ನೋಡಿದರೆ ಯಾವುದೇ ರಾಜಕೀಯ ಮಾಡದೇ ಗೆಲ್ಲಿಸಬೇಕು ಎಂದೆನಿಸುತ್ತದೆ. ಅವರನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸುವ ಮೂಲಕ ಸಿದ್ದೇಶ್ವರ ಅವರಿಗೆ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ದೂಡಾ ಮಾಜಿ ಅಧ್ಯಕ್ಷ ಎಂ.ಜಯಕುಮಾರ್, ಸೋಗಿ ಶಾಂತಕುಮಾರ್, ಕೋಳಿ ಇಬ್ರಾಹಿಂ, ಗಣೇಶ್ ಹುಲ್ಮನಿ, ಎನ್.ಎಂ.ಆಂಜನೇಯ ಗುರೂಜಿ, ಬುತ್ತಿ ಹುಸೇನ್‌ಪೀರ್, ಬಿ.ಎಚ್.ವೀರಭದ್ರಪ್ಪ, ರಾಜಾ ನಾಯಕ್, ಕಲ್ಲಿಂಗಪ್ಪ, ಸಂಗನಗೌಡ್ರು, ಎಸ್. ಎಸ್.ಗಿರೀಶ್ ಇತರರು ಈ ಸಂದರ್ಭದಲ್ಲಿದ್ದರು.

## ಪ್ರಭಾ ಮಲ್ಲಿಕಾರ್ಜುನ್‌ಗೆ ಶಿವಕುಮಾರ್‌ಒಡೆಯರ್ ಬೆಂಬಲ



ದಾವಣಗೆರೆ, ಏ.21- ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಆಕಾಂಕ್ಷಿಯಾಗಿದ್ದ ಮಾಜಿ ಸಂಸದ ದಿ. ಚೆನ್ನಯ್ಯ ಒಡೆಯರ್ ಅವರ ಸುಪುತ್ರ ಶಿವಕುಮಾರ್ ಒಡೆಯರ್ ಅವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ|| ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಬೆಂಬಲಿಸಿ ಶುಭ ಹಾರೈಸಿದರು.

## ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಕಲಾವಿದರುಗಳಿಗೆ ಸನ್ಮಾನ





ದಾವಣಗೆರೆ, ಏ. 21 - ನಗರದ ರೋಟರಿ ಬಾಲಭವನದಲ್ಲಿ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದಿಂದ ನಡೆದ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಕಲಾವಿದರುಗಳಿಗೆ ಸನ್ಮಾನಿಸಲಾಯಿತು. ಮಹಿಳಾ ಕಲಾವಿದರಿಗೆ ಉಚಿತ ಸೀರೆ ವಿತರಿಸಲಾಯಿತು.

ಕಲಾವಿದ ಎನ್.ಎಸ್.ರಾಜು, ಶ್ರೀಮತಿ ಎಚ್.ಕೆ. ಸತ್ಯಭಾಮ, ಡಿ.ಎಂ, ಕಲ್ಪನಾ ರಾಜ್, ಎಂ.ಎಸ್. ನಾಗರಾಜಪ್ಪ, ಶಿವನಗೌಡ ಎ. ಸೂರ್ಯಗೌಡ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕೃಷಿ ಪದವಿ ಕೋರ್ಸ್ ತರಬೇತಿ

ದಾವಣಗೆರೆ, ಏ. 21- ದ್ವಿತೀಯ ಪಿಯುಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕೃಷಿ ಕೋಟಾದಡಿಯಲ್ಲಿ ಕೃಷಿಗೆ ಸಂಬಂಧಿಸಿದ ಪದವಿಗಳಿಗೆ ಪ್ರವೇಶ ಪಡೆಯಲು ಇರುವ ಪ್ರಾಯೋಗಿಕ ಪರೀಕ್ಷೆಗೆ ಹಾಗೂ ಕೃಷಿ ಪದವಿ ಕೋರ್ಸ್‌ಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ನಾಳೆ ದಿನಾಂಕ 22 ರಿಂದ ನಗರದ ಐಸಿಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ವಿಜ್ಞಾನಿ, ಕೇಂದ್ರದ ಮುಖ್ಯಸ್ಥ ಡಾ.ಟಿ.ಎನ್. ದೇವರಾಜ್ ತಿಳಿಸಿದ್ದಾರೆ.

ಕೃಷಿ ಪದವಿಗಳಿಗೆ ಪ್ರವೇಶ ಬಯಸುವ ಕೃಷಿಕರ ಮಕ್ಕಳಿಗೆ ಶೇ.50 ರಷ್ಟು ಮೀಸಲಾತಿಯನ್ನು ರಾಜ್ಯ ಸರ್ಕಾರ ನೀಡಿದ್ದು, ಇದರ ಸದುಪಯೋಗ ಪಡೆಯಬೇಕೆಂದು ಅವರು ಕೋರಿದ್ದಾರೆ. ಈಗಾಗಲೇ ತರಬೇತಿ ಪಡೆದ 284 ವಿದ್ಯಾರ್ಥಿಗಳು ರಾಜ್ಯದ ವಿವಿಧ ಕೃಷಿ, ತೋಟಗಾರಿಕೆ ಮತ್ತು ಪಶು ವಿಜ್ಞಾನ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುತ್ತಾರೆ. ವಿವರಕ್ಕೆ ಸಂಪರ್ಕಿಸಿ : 08192-263462, 297142.

## ನೇಹಾ ಕೊಲೆ ಪ್ರಕರಣ : ಎಐಎಂಎಸ್‌ಎಸ್ ಖಂಡನೆ

ದಾವಣಗೆರೆ, ಏ. 21- ಹುಬ್ಬಳ್ಳಿಯ ಬಿವಿಬಿ ಕಾಲೇಜಿನ ವಿದ್ಯಾರ್ಥಿನಿ ನೇಹಾ ಹಿರೇಮಠರ ಭೀಕರ ಕೊಲೆ ಪ್ರಕರಣವನ್ನು ಎಐಎಂಎಸ್‌ಎಸ್ ತೀವ್ರವಾಗಿ ಖಂಡಿಸಿದೆ. ಹಾಡು ಹಾಗಲೇ ಕಾಲೇಜಿನ ಆವರಣದಲ್ಲಿ ಬಹಿರಂಗವಾಗಿ ಹಲವಾರು ಬಾರಿ ಚೂರಿಯಿಂದ ಇರಿದು ಕೊಂದಿರುವ ಈ ವಿಕೃತ ಘಟನೆ ಇಡೀ ಸಮಾಜವೇ ತಲೆ ತಗ್ಗಿಸುವಂತೆ ಮಾಡಿದೆ. ಮೃತ ವಿದ್ಯಾರ್ಥಿನಿಯ ಕುಟುಂಬಕ್ಕೆ ಸಂತಾಪ ಸೂಚಿಸಿದ ಎಐಎಂಎಸ್‌ಎಸ್ ಅಪರಾಧಿಗೆ ನಿದರ್ಶನೀಯ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿದೆ.

ಸಮಾಜದಲ್ಲಿ ಹೆಚ್ಚುತ್ತಿರುವ ಸಾಂಸ್ಕೃತಿಕ ಅಧಃಪತನ, ಇಂತಹ ಘಟನೆಗಳಿಗೆ ಕಾರಣವಾಗಿದೆ. ವಿದ್ಯಾರ್ಥಿ-ಯುವಜನರ ಮುಂದೆ ಯಾವುದೇ ಆದರ್ಶಗಳಿಲ್ಲದೇ, ನವೋದಯ ಚಿಂತಕರಾದ ರಾಮ್‌ಮೋಹನ್ ರಾಯ್, ವಿದ್ಯಾಸಾಗರ್, ಟ್ಯಾಗೋರ್, ಶರತ್ ಚಂದ್ರ, ಸುಬ್ರಹ್ಮಣ್ಯ ಭಾರತಿ, ಕುವೆಂಪು ಹಾಗೂ ಭಗತ್ ಸಿಂಗ್, ನೇತಾಜಿ, ಪ್ರೀತಿ ಲತಾ ಮತ್ತಿತರರ ಆದರ್ಶ ವಿಚಾರಗಳಿಲ್ಲದೇ ದಿಕ್ಕು ತಪ್ಪಿದ್ದಾರೆ. ಹೀಗಾಗಿ ಸಕಾರಾತ್ಮಕ, ಸಾಮಾಜಿಕ ಮನೋಭಾವವು ಕುಂಠಿತಗೊಳ್ಳುತ್ತಿದ್ದು, ವಿದ್ಯಾರ್ಥಿ ಯುವಜನರ ಸರ್ವತೋಮುಖ ಬೆಳವಣಿಗೆಗೆ ಅಡ್ಡಿ ಉಂಟುಮಾಡಿದೆ.

ಈ ಘಟನೆ ಕುರಿತು ನಿಷ್ಪಕ್ಷಪಾತ ತನಿಖೆಯಾಗಬೇಕು. ಕಾರಣಗಳು ಏನೇ ಕಂಡು ಬಂದರೂ ಯಾವುದೇ ದುರುದ್ದೇಶಪೂರಿತ ಹಿತಾಸಕ್ತಿಗೆ ಮಣಿ ಹಾಕದಂತೆ ಇಲ್ಲಿಯವರೆಗೆ ಹರಡಿರುವ ವದಂತಿಗಳಿಗೆ ತೆರೆ ಎಳೆಯಬೇಕೆಂದು ಒತ್ತಾಯಿಸಿದೆ.

## ಚೆಸ್ ಟೂರ್ನಮೆಂಟ್ : ಪ್ರಜ್ವಲ್ ಪ್ರಥಮ



**ರಾಣೇಬೆನ್ನೂರು**

ರಾಣೇಬೆನ್ನೂರು, ಏ.21- ಇಲ್ಲಿನ ಖನ್ನೂರ ವಿದ್ಯಾನಿಕೇತನ ಸ್ಕೂಲ್‌ನಲ್ಲಿ, ದಿವಂಗತ ಮಹಾದೇವಪ್ಪ ಎಂ. ಖನ್ನೂರ ಇವರ ಸ್ಮರಣಾರ್ಥವಾಗಿ ಭಾನುವಾರದಂದು 2ನೇ ಓಪನ್ ರ್‍ಯಾಪಿಡ್ ಚೆಸ್ ಟೂರ್ನಮೆಂಟ್ ಯಶಸ್ವಿಯಾಗಿ ನಡೆಯಿತು.

ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಜ್ವಲ್ (ಪ್ರಥಮ), ಆಂಧ್ರಪ್ರದೇಶದ ದುಲಿಪಾಲ್ ಚಂದ್ರಪ್ರಸಾದ (ದ್ವಿತೀಯ), ಶಿವಮೊಗ್ಗದ ಚಿರಂತ್ (ತೃತೀಯ) ಸ್ಥಾನ ಪಡೆದಿದ್ದಾರೆ.

ಬೆಸ್ಟ್ ಹಾವೇರಿ ವಿಭಾಗದಲ್ಲಿ ಎನ್.ಸಿ. ಮಹಾಲಿಂಗಪ್ಪ ಹಾಗೂ ಜೆ. ಮಹೇಶ್ ಆಯ್ಕೆಯಾಗಿದ್ದಾರೆ ಮತ್ತು ಬೆಸ್ಟ್ ರಾಣೇಬೆನ್ನೂರು ವಿಭಾಗದಲ್ಲಿ ಎಂ.ಕೆ. ಚೇತನ್ ಹಾಗೂ ಶ್ರೇಯಸ್ ಶೀಲವಂತರ ಆಯ್ಕೆಯಾಗಿದ್ದಾರೆ.

## ನೇಹಾ ಹತ್ಯೆ ಖಂಡಿಸಿ ಮಲೇಬೆನ್ನೂರಿನಲ್ಲಿ ಪ್ರತಿಭಟನೆ



ಮಲೇಬೆನ್ನೂರು, ಏ.21- ಹುಬ್ಬಳ್ಳಿಯ ಕಾಲೇಜು ಆವರಣದಲ್ಲಿ ಹಿಂದೂ ಸಮುದಾಯಕ್ಕೆ ಸೇರಿದ ಯುವತಿ ಹತ್ಯೆ ನಡೆದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸುಮ್ಮನಿದ್ದಾರೆ, ಗೃಹಮಂತ್ರಿ ಜಿ. ಪರಮೇಶ್ವರ ಅವರು ಬೇಕಾಬಿಟ್ಟಿ ಹೇಳಿಕೆ ನೀಡುತ್ತಿದ್ದಾರೆ ಎಂದು ಹಿಂದೂ ಜಾಗರಣಾ ವೇದಿಕೆ ಜಿಲ್ಲಾ ಸಂಚಾಲಕ ಸತೀಶ್ ಪೂಜಾರಿ ಖಂಡಿಸಿದರು.

ಭಾನುವಾರ ಪಟ್ಟಣದ ಮುಖ್ಯವೃತ್ತದಲ್ಲಿ ಮೃತ ನೇಹಾ ಹಿರೇಮಠ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಅವರು ಮಾತನಾಡಿದರು.

ಹಿಂದೂ ಯುವತಿ ಹತ್ಯೆ ಮಾಡಿದ ವ್ಯಕ್ತಿ ಕುಟುಂಬಕ್ಕೆ ಪೊಲೀಸ್ ರಕ್ಷಣೆ ನೀಡುತ್ತಿದ್ದಾರೆ. ಮಲೇಬೆನ್ನೂರು ಸೇರಿದಂತೆ ಹಲವೆಡೆ ಹಿಂದೂ ಯುವಕರ ಮೇಲೆ ಚಾಕುವಿನಿಂದ ಇರಿದು ಹಲ್ಲೆ ಮಾಡಲಾಗಿದೆ. ಹಿಂದೂ ಸಮಾಜ ಇಂತಹ ಘಟನೆಗಳನ್ನು ಸಹಿಸುವುದಿಲ್ಲ. ಯುವತಿಯರು ಆತ್ಮರಕ್ಷಣೆಗೆ ಚೂರಿ ಹಿಡಿದು ಶಾಲೆಗೆ ಹೋಗಬೇಕಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮುಸ್ಲಿಮರು ಹಿಂದೂಗಳೊಂದಿಗೆ ಸಾಮರಸ್ಯ, ಸಹಬಾಳ್ವೆ ಜೀವನ ನಡೆಸಬೇಕು ಎಂದ ಸತೀಶ್ ಅವರು, ಸರ್ಕಾರ ತಪ್ಪಿಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಹತ್ಯೆಗೀಡಾದ ಯುವತಿ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

ನಂತರ ನಾಡ ಕಛೇರಿಗೆ ತೆರಳಿ ಉಪ ತಹಶೀಲ್ದಾರ್ ಆರ್.ರವಿ ಅವರಿಗೆ ಮನವಿ ಅರ್ಪಿಸಿದರು. ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ತಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಪುರಸಭೆ ಸದಸ್ಯ ಬೆಣ್ಣೆಹಳ್ಳಿ ಸಿದ್ದೇಶ್, ಭೋವಿ ಮಂಜಣ್ಣ, ಬೇಕರಿ ರಾಘವೇಂದ್ರ, ಪೂಜಾರ್ ಗಂಗಾಧರ್, ಕೊಮಾರನಹಳ್ಳಿ ಸುನೀಲ್, ನಿರಂಜನ್ (ಪಿಂಟು) ಸೇರಿದಂತೆ ಮಹಿಳಾ ಕಾರ್ಯಕರ್ತರು ಭಾಗವಹಿಸಿದ್ದರು. ಪೊಲೀಸರು ಭದ್ರತೆ ಒದಗಿಸಿದ್ದರು.


## ಹರಿಹರ ಕ್ಷೇತ್ರದಲ್ಲಿ ಇಂದು ಡಾ.ಪ್ರಭಾ ಪ್ರಚಾರ



ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಇಂದು ಹರಿಹರ ಕ್ಷೇತ್ರದಲ್ಲಿ ಪ್ರಚಾರ ಕೈಗೊಳ್ಳಲಿದ್ದಾರೆ.

ಬೆಳಿಗ್ಗೆ 10 ಕ್ಕೆ ಕುಣೆಬೆಳಕೆರೆಯಿಂದ ಪ್ರಾರಂಭವಾಗುವ ಪ್ರಚಾರವು, ನಂತರ ನಂದಿತಾವರೆ, ಭಾಸ್ಕರ್ ರಾವ್ ಕ್ಯಾಂಪ್, ವಿನಾಯಕ ನಗರ ಕ್ಯಾಂಪ್, ಜಿಗಳಿ, ಕುಂಬಳೂರು, ನಿಟ್ಟೂರು, ಆದಾಪುರ, ಬೂದಿಹಾಳ್, ನೆಹರು ಕ್ಯಾಂಪ್, ಗುಳದಹಳ್ಳಿ, ಸಂಕ್ಲೀಪುರ, ಮಲ್ಲನಾಯಕನ ಹಳ್ಳಿ ಹರಳಹಳ್ಳಿ, ಹಾಲಿವಾಣ, ಕೊಪ್ಪ, ದಿಬ್ಬದಹಳ್ಳಿ, ಕೊಮಾರನಹಳ್ಳಿ, ಬಸಾಪುರ, ಜಿ ಬೇವಿನಹಳ್ಳಿ, ಹಳ್ಳಿಹಾಳ್, ಹಳ್ಳಿಹಾಳ್ ಕ್ಯಾಂಪ್, ಕಂಬತ್ತನಹಳ್ಳಿ, ಕೊಕ್ಕನೂರು, ಜಿ.ಟಿ.ಕಟ್ಟಿ, ಮೂಗಿನಗೊಂದಿ, ಹಿಂಡಸಘಟ್ಟ, ಗೋವಿನಹಾಳ್ ಗ್ರಾಮಗಳಲ್ಲಿ ನಡೆಯಲಿದೆ. ಮಾಜಿ ಶಾಸಕ ಎಸ್.ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಬಿ.ಎಂ.ವಾಗೀಶ್ ಸ್ವಾಮಿ ಸೇರಿದಂತೆ ಇನ್ನೂ ಅನೇಕ ಮುಖಂಡರು ಭಾಗವಹಿಸಲಿದ್ದಾರೆಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಎಲ್.ಬಿ.ಹನುಮಂತಪ್ಪ ತಿಳಿಸಿದ್ದಾರೆ.

## ನನ್ನ ಏಳಿಗೆ ಸಹಿಸದ ವಿರೋಧಿಗಳಿಂದ ತೇಜೋವಧೆ : ವಿನಯ್ ಕುಮಾರ್



ದಾವಣಗೆರೆ,ಏ.21- ಜಿಲ್ಲೆಯಾದ್ಯಂತ ನನ್ನ ಜನಪ್ರಿಯತೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಆದ್ರೆ, ವಿರೋಧಿಗಳು ನನ್ನ ತೇಜೋವಧೆ ಮಾಡುವ ಮೂಲಕ ಸುಳ್ಳು ವದಂತಿ ಸೃಷ್ಟಿಸಲು ಯತ್ನಿಸುತ್ತಿದ್ದಾರೆ. ಇಂಥದ್ದಕ್ಕೆ ಯಾರೂ ಕಿವಿಗೊಡಬೇಡಿ ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಸ್ಪಷ್ಟನೆ ನೀಡಿದ್ದಾರೆ.

ಫೋಟೋ ಎಡಿಟ್ ಮಾಡಿ ಜನರಿಗೆ ತಪ್ಪು ಸಂದೇಶ ನೀಡುವಂತೆ ಪೋಸ್ಟರ್ ಹರಿಬಿಡಲಾಗಿದೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿ ಹೊರ ಬರುವಾಗ ಬಿಜೆಪಿ ಮುಖಂಡರು ಮಾತನಾಡಿಸಿದರು. ಅದನ್ನೇ ಫೋಟೋ ತೆಗೆದು ಎಡಿಟ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ನಾನು ಇದ್ದಾಗ ಪೊಲೀಸರು ಸೇರಿದಂತೆ ಹಲವರು ಇದ್ದರು. ಈ ಸಂಬಂಧ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡುತ್ತೇನೆ. ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಎಷ್ಟೇ ನನ್ನ ವಿರುದ್ಧ ಪಿತೂರಿ ಮಾಡಿದರೂ ಜನರು ನಂಬುವ ಸ್ಥಿತಿಯಲ್ಲಿ ಇಲ್ಲ ಎಂದು ವಿನಯ್ ಕುಮಾರ್ ಹೇಳಿದ್ದಾರೆ. ರಾಜಕೀಯ ವಿರೋಧಿಗಳು ನನ್ನ ಏಳಿಗೆ ಸಹಿಸಲು ಆಗದೇ ಅಪಪ್ರಚಾರದಲ್ಲಿ ನಿರತರಾಗಿದ್ದಾರೆ. ಇದಕ್ಕೆ ಅಭಿಮಾನಿಗಳು, ಹಿತೈಷಿಗಳು, ಸ್ವಾಭಿಮಾನದ ಬೆಂಬಲಿಗರು ತಲೆಕೆಡಿಸಿಕೊಳ್ಳಬೇಡಿ ಎಂದು ಮನವಿ ಮಾಡಿದ್ದಾರೆ.

ಮಾಜಿ ಸಚಿವರಾದ ಗಾಲಿ ಜನಾರ್ದನ ರೆಡ್ಡಿ, ಎಸ್. ಎ. ರವೀಂದ್ರನಾಥ್ ಅವರು ಶುಕ್ರವಾರ ಸಿದ್ದೇಶ್ವರ ಅವರು ನಾಮಪತ್ರ ಸಲ್ಲಿಸುವಾಗ ಬಂದಿದ್ದರು. ಆಗ ಸಹಜವಾಗಿಯೇ ಕುಶಲೋಪರಿ ವಿಚಾರಿಸಿದರು. ಇದೊಂದು ಆಕಸ್ಮಿಕ ಭೇಟಿ. ಇದಕ್ಕೆ ಕಥೆ ಕಟ್ಟುವುದು ಸರಿಯಲ್ಲ ಎಂದು ವಿನಯ್ ಕುಮಾರ್ ಹೇಳಿದ್ದಾರೆ.

ಕೋಟಿ ರೂಪಾಯಿ ಕೊಟ್ಟರೂ ಇಷ್ಟೊಂದು ಜನಪ್ರಿಯತೆ ಸಿಗುವುದಿಲ್ಲ. ಉಚಿತವಾಗಿ ಪ್ರಚಾರ ನೀಡಿದ್ದೀರಾ. ಜನರು ನನ್ನ ಮೇಲೆ ಪ್ರೀತಿ, ವಿಶ್ವಾಸ ತೋರಿದ್ದಾರೆ, ತೋರುತ್ತಲೇ ಇದ್ದಾರೆ. ಒಡೆದಾಳುವ ನೀತಿ ತೋರಿಸಬೇಡಿ. ನಿಮಗೇ ನಷ್ಟ ಎಂದು ವಿನಯ್ ಕುಮಾರ್ ತಿಳಿಸಿದ್ದಾರೆ.

ನಾಮಪತ್ರ ಸಲ್ಲಿಕೆಯ ಕೊನೆಯ ದಿನ ಜಿಲ್ಲಾಧಿಕಾರಿ ಕಚೇರಿಗೆ ನಾನು ಪಕ್ಷೇತರ ಅಭ್ಯರ್ಥಿಯಾಗಿ ಮತ್ತೊಮ್ಮೆ ನಾಮಪತ್ರ ಸಲ್ಲಿಸಲು ಹೋಗಿದ್ದೆ.

ಈ ವೇಳೆ ಬಿಜೆಪಿ ಸಂಸದ ಜಿ.ಎಂ.ಸಿದ್ದೇಶ್ವರ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಶಿವಯೋಗಿ ಸ್ವಾಮಿ, ಮಾಜಿ ಸಚಿವ ರವೀಂದ್ರನಾಥ್ ಸೇರಿದಂತೆ ಮತ್ತಿತರರು ಹಾಜರಿದ್ದರು. ಅವರೆಲ್ಲರೂ ಮಾತನಾಡಿಸಿದರು ಎಂದು ಅವರು ವಿವರಿಸಿದ್ದಾರೆ.

## ವಿದ್ಯೆಯ ಜೊತೆ ಸಂಸ್ಕಾರ ಪಡೆದವರು ಮಹಾನ್ ವ್ಯಕ್ತಿಗಳಾಗುತ್ತಾರೆ : ರೇಣುಕಾ ಮಾತಾಜಿ

ದಾವಣಗೆರೆ, ಏ. 21 - ಬೆಂಗಳೂರಿನ ಜ್ಞಾನ ಸಮೃದ್ಧಿ ವಿದ್ಯಾ ಕೇಂದ್ರದ ವತಿಯಿಂದ ನಗರದ ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಆರಂಭವಾದ ಗಾಂಧಾರಿ ವಿದ್ಯೆ ತರಬೇತಿ ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನಗರದ ಸಿದ್ಧಿ ಸಮಾಧಿ ಯೋಗದ ಶಿಕ್ಷಕರಾದ ರೇಣುಕಾ ಮಾತಾಜಿ ಮಾತನಾಡಿದರು.



ಶಿಬಿರದ ತರಬೇತಿದಾರರಾದ ಜೆಂಬಿಗಿ ಕೊಟ್ರೇಶ್ ಅವರು ಮಕ್ಕಳ ತೀಕ್ಷ್ಣ ಬುದ್ಧಿಗೆ, ಚುರುಕುತನಕ್ಕೆ ಈ ವಿದ್ಯೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕನ್ನಡ ಉಪನ್ಯಾಸಕರು ಹಾಗೂ ಸಾಹಿತಿಗಳು ಆದ ಜೆಂಬಿಗಿ ಮೃತ್ಯುಂಜಯ ಅವರು ಮಾತನಾಡಿ, ಬೆಳೆಯುವ ಸಿರಿ ಮೊಳಕೆಯಲ್ಲಿ, ಬೆಳೆ ನಾವು ಬಯಸಿದಂತಲ್ಲ ಬೆಳೆಸಿದಂತೆ, ಚಿಕ್ಕಂದಿನಲ್ಲಿಯೇ ಮಕ್ಕಳಿಗೆ ಉತ್ತಮ ಸಂಸ್ಕಾರ, ಹವ್ಯಾಸ, ಧಾರ್ಮಿಕ ಶ್ರದ್ಧೆ, ಯೋಗಭ್ಯಾಸ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರೆ ಉತ್ತಮ ವ್ಯಕ್ತಿಗಳಾಗಿ ಬೆಳೆಯುತ್ತಾರೆ ಎಂದರು.

## ಜಿಗಳಿಯಲ್ಲಿ ಇಂದು ನೂತನ ದೇವಸ್ಥಾನಗಳ ಉದ್ಘಾಟನೆ, ಪ್ರಾಣ ಪ್ರತಿಷ್ಠಾಪನೆ



ಮಲೇಬೆನ್ನೂರು ಸಮೀಪದ ಜಿಗಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಕಲ್ಲೇಶ್ವರ ದೇವಸ್ಥಾನ ಮತ್ತು ಗ್ರಾಮ ದೇವತೆ ಶ್ರೀ ಉಡುಸಲಮ್ಮದೇವಿ ದೇವಸ್ಥಾನಗಳ ಉದ್ಘಾಟನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭವನ್ನು ಇಂದು ಹಮ್ಮಿಕೊಳ್ಳಲಾಗಿದೆ. ಮುಂಜಾನೆ 3.30 ರಿಂದ 4.30 ರವರೆಗೆ ಗಂಗಾಪೂಜೆ, ಗಣಪತಿ ಪೂಜೆ, ಕಳಸಧಾರಣೆ, ನವಗ್ರಹ ಶಾಂತಿ ಹೋಮ, ಹವನ ಅಷ್ಟೋತ್ತರ ಮಹಾಮಂಗಳಾರತಿ ನಂತರ ಶ್ರೀ ಕಲ್ಲೇಶ್ವರ ದೇವರ ಶಿಲಾ ಮೂರ್ತಿಯನ್ನು ನಂದಿಗುಡಿ ಮಠದ ವಟುಗಳಿಂದ ನೆರವೇರಿಸಲಾಗುವುದು.

ಬೆಳಿಗ್ಗೆ 5ಕ್ಕೆ ಗ್ರಾಮದೇವತೆ ಶ್ರೀ ಉಡುಸಲಮ್ಮ ದೇವಿಯ ಶಿಲಾ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯನ್ನು ಮಲೇಬೆನ್ನೂರಿನ ಶ್ಯಾಮ ಸುಂದರ್ ಜೋಯ್ಸ್, ಎಂ.ಡಿ. ಮುರುಳೀಧರ ರಾವ್ ಮತ್ತು ಸಂಗಡಿಗರು ನೆರವೇರಿಸಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಎರಡೂ ದೇವಸ್ಥಾನಗಳಿಗೆ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ರಟ್ಟಿಹಳ್ಳಿ ಕಬ್ಬಿಣ ಕಂಥಿ ಮಠದ ಶ್ರೀ ಶಿವಲಿಂಗ ಶಿವಚಾರ್ಯ ಸ್ವಾಮೀಜಿ, ಯಲಹಟ್ಟಿ ಶ್ರೀಗುರು ಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಕಳಸಾರೋಹಣ ಮಾಡುವರು.

## ಸೌಹಾರ್ದತೆಯ ಭಾರತದ ಉಳಿವಿಗಾಗಿ ಜಾತ್ಯತೀತ ಪಕ್ಷಕ್ಕೆ ಮತ ನೀಡಲು ಕರೆ

ದಾವಣಗೆರೆ, ಏ.21- ಸಂವಿಧಾನಿಕ ಭಾರತ, ಸಾಮರಸ್ಯ, ಸೌಹಾರ್ದತೆಯ ಭಾರತದ ಉಳುವಿಗಾಗಿ ಜಾತ್ಯತೀತ ಪಕ್ಷಕ್ಕೆ ಮತ ನೀಡುವಂತೆ ಪ್ರಗತಿಪರ ಸಂಘಟನೆಗಳ ಒಕ್ಕೂಟ ಕರೆ ನೀಡಿದೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಎ.ಬಿ. ರಾಮಚಂದ್ರಪ್ಪ, ಕೇಂದ್ರ ಸರ್ಕಾರದ ಜನ ವಿರೋಧಿ ದೋರಣೆ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ ಎಂದರು.

ಪ್ರಜಾಪ್ರಭುತ್ವದ ಹೆಸರಿನಲ್ಲಿ ಸರ್ವಾಧಿಕಾರಿ ಧೋರಣೆ ನಡೆಸಲಾಗುತ್ತಿದೆ. ಇಂತಹ ಸರ್ಕಾರ ಇವರನ್ನು ಸೋಲಿಸದಿದ್ದರೆ ಪ್ರಜಾಪ್ರಭುತ್ವಕ್ಕೆ ಅಪಾಯವಾಗಿದ್ದು, ಜನರು ತಮ್ಮ ಹಕ್ಕನ್ನು ಜವಾಬ್ದಾರಿಯಿಂದ ಚಿಂತಿಸಿ ಚಲಾಯಿಸುವಂತೆ ಹೇಳಿದರು.

ವಕೀಲ ಅನಿಸ್ ಪಾಷಾ ಮಾತನಾಡಿ, ನಮಗೆ ಬೇಕಾಗಿರುವ ರಾಮರಾಜ್ಯ, ನೆಮ್ಮದಿಯ ಬದುಕು. ಆದ್ದರಿಂದ ಆದ್ಯತೆ ಮೇಲೆ ಮತ ಚಲಾಯಿಸಬೇಕು ಎಂದರು.

ಎಐಟಿಯುಸಿಯ ಆವರಗೆರೆ ಉಮೇಶ್, ಕರ್ನಾಟಕ ಶ್ರಮಿಕ ಶಕ್ತಿಯ ಸತೀಶ್, ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಶಿವಕುಮಾರ್ ಮಾಡಾಳ್, ಪವಿತ್ರ ಪತ್ರಿಕಾಗೋಷ್ಠಿಯಲ್ಲಿದ್ದರು.


**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್, # 1776/A-73, 1ನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ : (ಸಸ್ಯಹಾರಿಗಳಿಗೆ ಮಾತ್ರ)
ಮೊ. 90195-07007

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ 30x40 East, ಅಥಣಿ ಕಾಲೇಜ್ ಹತ್ತಿರ, 40 ಅಡಿ ರೋಡ್‌ಗಿದೆ. 30x42 North, 30x40 North 100 ಅಡಿ ರೋಡ್‌ಗೆ ಹತ್ತಿರ, ಬನಶ್ರಿ ಲೇಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 40x40 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಮರ್ಷಿಯಲ್ ಖಾಲಿ ಜಾಗ ಬಾಡಿಗೆಗೆ ದೊರೆಯುತ್ತದೆ**
ಶಾಮನೂರು ಹತ್ತಿರ, ಸರ್ವೀಸ್ ರೋಡ್‌ಗೆ 26 ಸಾವಿರ ಅಡಿ 160x180 ಸೈಜಿನ ಜಾಗ. Top in Town Hotel ಹತ್ತಿರ,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡ ಹತ್ತಿರ, ಸುಶಿ ಕನ್ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x40 ಪಶ್ಚಿಮ, 30x50 ಉತ್ತರ, 30x40 ಪಶ್ಚಿಮ ಅಕ್ಕ-ಪಕ್ಕ 30x50 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**Property Hub**
• EC
• E-swathu
• Building Licence
• Khatha Change
96118 66449

**ಕಾರುಗಳು ಮಾರಾಟಕ್ಕಿವೆ**
Maruthi Alto Lxi 2 ಲಕ್ಷಕ್ಕೆ
Renault Duster SUV 4.8 ಲಕ್ಷಕ್ಕೆ
Volkswagen Vento 4.8 ಲಕ್ಷಕ್ಕೆ
New Baleno alpha 7.9 ಲಕ್ಷಕ್ಕೆ
ಡ್ರೈವಿಕ್ ಐನಳ್ಳಿ
99456 43223

**ಮನೆಗಳು ಮಾರಾಟಕ್ಕಿವೆ**
30x60 North, ಮೂರು ಫ್ಲೋರ್ ಮನೆ ವಿದ್ಯಾನಗರದಲ್ಲಿ ಹೊಸ ಮನೆ, ಡಾಲರ್ಸ್ ಕಾಲೋನಿಯಲ್ಲಿ 30x50 North, ಎರಡು ಫ್ಲೋರ್ ಮನೆ, ಹೊಸ ಮನೆ, ಸಿದ್ದವೀರಪ್ಪ ಬಡಾವಣೆ, ರೋಡಿಗೆ ಹತ್ತಿರ, 30x44, South ಎರಡು ಫ್ಲೋರ್ ಮನೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಬಾಡಿಗೆಗೆ/ ಲೀಸ್‌ಗಿವೆ**
1BHK ಆರ್ ಸಿ ಸಿ 1ನೇ ಮಹಡಿ ಮನೆ, ನಿಟುವಳ್ಳಿ, ಲೆನಿನ್ ನಗರ, ದಾವಣಗೆರೆ. ಲೀಸ್ ಮೊತ್ತ 2 ಲಕ್ಷ, 2BHK ಆರ್ ಸಿ ಸಿ 2ನೇ ಮಹಡಿ ಮನೆ, ಲೀಸ್ ಮೊತ್ತ 5.5 ಲಕ್ಷ, ಹಾಗೂ 1BHK ಆರ್ ಸಿ ಸಿ 1ನೇ ಮಹಡಿ ಮನೆ ಲೀಸ್ ಮೊತ್ತ 5 ಲಕ್ಷ ಹಾಗೂ 1BHK ಶೀಟಿನ 3ನೇ ಮಹಡಿ ಮನೆ. ಬಾಡಿಗೆ 3,000/-. ದೇವರಾಜ ಅರಸ್ ಬಡಾವಣೆ, ದಾವಣಗೆರೆ. ಬೋರ್ ವೆಲ್/ಕಾರ್ಪೊರೇಷನ್ ನೀರಿನ ವ್ಯವಸ್ಥೆ. ಕಾರ್ ಪಾರ್ಕಿಂಗ್ ಹಾಗೂ ಪೂರ್ವ ಬಾಗಿಲು ಇರುತ್ತದೆ.
97417 46205, 73493 97287

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**DXN ಹೆಲ್ತ್ ಕೇರ್ ಆರ್ಗ್ಯಾನಿಕ್ ಪ್ರಾಡಕ್ಟ್ಸ್**
ಶ್ವಾಸಕೋಶ ಬ್ಲಾಕ್ ನಿರ್ಮೂಲನೆಗೆ, ಹೃದಯಾಘಾತ, ಪಾರ್ಶ್ವವಾಯು, ಕೊಲೆಸ್ಟ್ರಾಲ್ ತಡೆಯಲು ಹಾಗೂ ಕಾಯಿಲೆ ಮುಕ್ತ ಆರೋಗ್ಯಕರ ಜೀವನಶೈಲಿಗೆ DXN ಉತ್ಪನ್ನಗಳನ್ನು ಬಳಸಿ. ವಿಳಾಸ : ಪಿ.ಜೆ.ಬಡಾವಣೆ, 8ನೇ ಮೇನ್, 7ನೇ ಕ್ರಾಸ್, ದಾವಣಗೆರೆ.
ಮೊ : 9916933905

**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸಿನಲ್ಲಿರುವ #2001ರಲ್ಲಿ 30x40 ಅಳತೆಯಲ್ಲಿರುವ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಶ್ರೀ ಜಿ.ಹೆಚ್. ಮಂಜುನಾಥ್
88849 62111

**ನೀರಾವರಿ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 7 ಕಿ.ಮೀ. ದೂರದ ಕೊಂಡಜ್ಜಿ ರೋಡ್, ಆವರಗೊಳ್ಳ ರಸ್ತೆ ಪಕ್ಕದಲ್ಲಿ, 120 ಅಡಿ ಸಿಮೆಂಟ್ ರಸ್ತೆಗೆ ಹೊಂದಿಕೊಂಡಿರುವ 34 ಗುಂಟೆ (ಸಿಂಗಲ್ ಓನರ್ ಜನರಲ್ ಪ್ರಾಪರ್ಟಿ) ನೀರಾವರಿ ಜಮೀನು ಮಾರಾಟಕ್ಕಿದೆ.
70190 73296

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**WANTED LADY TEACHERS**
D.Ed- 5, BA, BE.d - 5, B.Sc, B.Ed - 5, Computer Teacher - 2, NTC-5, Aya-3
95356 10817

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
90367 34919

**ಜಮೀನು ಮಾರಾಟಕ್ಕಿದೆ**
1) 1 ಎಕರೆ, ಹರಿಹರ-ಶಿವಮೊಗ್ಗ ರಸ್ತೆಗೆ @ Rs. 1 crore 50 Lakhs
2) 5 ಎಕರೆ, ಚನ್ನಗಿರಿ ರಸ್ತೆಗೆ @ Rs 2 Crore Acre
(Contact Only Buyers)
Sharma : 63608 66997

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**REQUIRED**
Site Supervisor for RR Nagar Bangalore
Experience 1 to 2 years
89519 38228

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಲೈಸೆನ್ಸ್ ಹಾಗೂ ದ್ವಿಚಕ್ರವಾಹನ ಹೊಂದಿರುವ ಕಾರ್ ಡ್ರೈವರ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
94486 56091
(ಮೇಲ್ಕಂಡ ನಂಬರ್‌ಗೆ ಈ ಹಿಂದೆ ಕರೆ ಮಾಡಿದ್ದವರು ಪುನಃ ಕರೆ ಮಾಡಬೇಡಿ)

**ಬ್ಯಾಡಗಿ ಕಾರದ ಪುಡಿ ದೊರೆಯುತ್ತದೆ**
ಅಶೋಕ ರೋಡ್, ಆನಂದ ಲಾಡ್ಜ್ ಸಂಪರ್ಕಿಸಿ.
90085 36467

**ಓದುಗರ ಗಮನಕ್ಕೆ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಶ್ರೀ ಕಲ್ಲೇಶ್ವರ ಮಿಲ್‌ನಲ್ಲಿ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಊಟದ ಸೌಲಭ್ಯವಿರುತ್ತದೆ. ತಕ್ಷಣ ಸಂಪರ್ಕಿಸಿ.
ಅಸೋಸಿಯೇಟೆಡ್ ಎಂಟರ್‌ಪ್ರೈಸಸ್
74111 13888, 97390 89022

**BHAVANI PAPERS**
All Kinds of college Book, King Size, Long Book, Blue Book, Assigenment Book, Done. Contact :
98443 03551

**ಶಿಕ್ಷಕಿಯರು ಬೇಕಾಗಿದ್ದಾರೆ**
ಜ್ಞಾನದೀಪ ಪಬ್ಲಿಕ್ ಸ್ಕೂಲ್, 60 ಅಡಿ ರಿಂಗ್ ರಸ್ತೆ, ನಿಟ್ಟುವಳ್ಳಿ, ದಾವಣಗೆರೆ - 577004.
1) B.A. B.Ed, History / Kannada - 2, 2) B.A. B.Ed, History / English - 2, 3) Hindi B.Ed - 1, 4) B.Sc / B.Sc B. Ed - 1 (PCM) 5) PUC / B.A D.Ed - 2, 6) PUC / R.B.S.T / NTC - 2
ಸಹಿ/- ಕಾರ್ಯದರ್ಶಿಗಳು
94496 79346, 89710 18943

**ಮನೆ / ಸೈಟ್ ಮಾರಾಟಕ್ಕಿದೆ**
ಗಿರಿಯಪ್ಪ ಲೇಔಟ್, ಶಂಕರ ಲೇಔಟ್, ಜೆ.ಹೆಚ್. ಪಟೇಲ್ ನಗರ, ಶಿವ ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ವಿನೋಬ ನಗರ, ವಿದ್ಯಾ ನಗರ ಬಡಾವಣೆ, ಅಶೋಕ ನಗರ, ಬಾಲಾಜಿ ನಗರ, ಎಸ್.ಎಸ್. ಲೇಔಟ್ 'ಎ' ಮತ್ತು 'ಬಿ'ಬ್ಲಾಕ್,
97402 00533

**ಬೇಕಾಗಿದ್ದಾರೆ**
1) ಆಯಾ
2) ವಾಚ್‌ಮನ್
(ಹಗಲು ಮತ್ತು ರಾತ್ರಿ ಡ್ಯೂಟಿ)
ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಆಸ್ಪತ್ರೆ,
2ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**TUITIONS**
IGCSE, ICSE, CBSE and State Board from class 5th to 12th MCC A Block
98444 92888

**ಪ್ರವೇಶ ಪ್ರಕಟಣೆ**
ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**OFFICE SPACE FOR RENT**
1, 2 & Basement Floor, (1000Sqft + Lift) ATM / Mobiles Shop Space, PB Road, Opp, RH Office Dvg.
99646 99096

**Summer Holidays Tuitions**
CBSE & State board - LKG to PU
Grammar & spoken English.
Hand Writing & basic knowledge
SINCHANA ACADEMY
Ram & Co Circle, Davangere.
9019580600 88614 45913

**ಬೋರ್ ವೆಲ್ ಪಾಯಿಂಟ್**
ಆಧುನಿಕ ತಂತ್ರಜ್ಞಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿ :
97436 54365
86609 98651

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ. 50 ಸದಸ್ಯರು 6500ರೂ. ರಿಂದ 10,000 ರೂ. ವರೆಗೆ
ಸ್ಕಂದ ಚಿಟ್ ಫಂಡ್ಸ್ (ರಿ)
78997 75159

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**ಕಾರ್ ಬಾಡಿಗೆಗೆ**
ಸಂಪರ್ಕಿಸಿ :
97436 54365
86609 98651

## ಚಿಕ್ಕ ಬಿದರಿ ಬಳಿ ಅಕ್ರಮ ಮರಳು ಸಂಗ್ರಹ : ಶಾಸಕ ಹರೀಶ್ ಆರೋಪ

ದಾವಣಗೆರೆ, ಏ.21- ವಿಜಯನಗರ ಚಿಕ್ಕ ಬಿದರಿ ಗ್ರಾಮದ ಬಳಿ ಸಾವಿರಾರು ಲೋಡ್ ನದಿ ಪಾತ್ರದ ಮರಳನ್ನು ಅಕ್ರಮವಾಗಿ ಸಂಗ್ರಹಿಸಲಾಗಿದೆ ಎಂದು ಹರಿಹರ ಶಾಸಕ ಬಿ.ಪಿ ಹರೀಶ್ ಆರೋಪಿಸಿದ್ದಾರೆ.

ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹರಿಹರ-ಹರಪನಹಳ್ಳಿ ಗಡಿ ಭಾಗದಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿದ್ದು, ಗಣಿ ಮತ್ತು ಭೂ ವಿಜ್ಞಾನ ಸಚಿವರಿಂದಲೇ ಇದನ್ನು ಮಾಡಿಸಲಾಗುತ್ತಿದೆ ಎಂದು ಆರೋಪಿಸಿದರು. ಸಚಿವರು ಬೇರೆಯವರ ಹೆಸರಿನಲ್ಲಿ ಬಹಳಷ್ಟು ಜಮೀನು ಖರೀದಿಸಿ ಅಲ್ಲಿ ಮರಳು ಸಂಗ್ರಹಿಸಿದ್ದಾರೆ. ನಗರಸಭೆ ಸದಸ್ಯರೊಬ್ಬರಿಗೆ ಮರಳು ದಂಧೆ ಮಾಡಲು ಬಿಟ್ಟು ಅವರನ್ನು ಕಾಂಗ್ರೆಸ್‌ಗೆ ಸೇರ್ಪಡೆ ಮಾಡಿಕೊಂಡಿ ದ್ದಾರೆ ಎಂದರು. ಇಷ್ಟೆಲ್ಲಾ ಆದರೂ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ. ಈ ಬಗ್ಗೆ ಗಣಿ ಇಲಾಖೆ ನಿರ್ದೇಶಕರಿಗೆ ದೂರು ನೀಡಿದ್ದೇನೆ ಎಂದು ಹೇಳಿದರು.

## ಬಿಸಿಲ ಪ್ರಕೋಪ ತೀವ್ರ

(1ನೇ ಪುಟದಿಂದ) ವಿದರ್ಭ ಹಾಗೂ ತೆಲಂಗಾಣಗಳಲ್ಲಿ ತಾಪಮಾನ 2ರಿಂದ 4 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ.

ಈ ತಿಂಗಳು ಎರಡನೇ ಬಾರಿಗೆ ಬಿಸಿ ಗಾಳಿ ಬೀಸುತ್ತಿದೆ. ಈ ಹಿಂದೆ ಒಡಿಶಾ, ಜಾರ್ಖಂಡ್, ಪಶ್ಚಿಮ ಬಂಗಾಳ, ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು ಹಾಗೂ ಗುಜರಾತ್‌ಗಳಲ್ಲಿ ಬಿಸಿ ಗಾಳಿ ಕಂಡು ಬಂದಿತ್ತು.

# ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ ಬ್ಯಾಂಕ್ ರಾಷ್ಟ್ರೀಕರಣದ ರೂವಾರಿ



### ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ 79ನೇ ಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಕೆ.ರಾಘುವೇಂದ್ರ ನಾಯರಿ

ದಾವಣಗೆರೆ, ಏ. 21 - ಬ್ಯಾಂಕ್ ರಾಷ್ಟ್ರೀಕರಣದ ರೂವಾರಿಯಾಗಿರುವ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ (ಎಐಬಿಇಎ) 79 ನೇ ಸ್ಥಾಪನಾ ದಿನದ ಅಂಗವಾಗಿ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ವತಿಯಿಂದ ಸಂಘದ ಕಛೇರಿಯಲ್ಲಿ ಧ್ವಜಾರೋಹಣ ಮಾಡುವುದರ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಧ್ವಜಾರೋಹಣ ಮಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಪ್ರದೇಶ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್‌ನ ಜಂಟಿ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಮಾತನಾಡಿ, ಅಖಿಲ ಭಾರತ ಬ್ಯಾಂಕ್ ನೌಕರರ ಸಂಘವು 1946 ರ ಏ. 20 ರಂದು ಬ್ಯಾಂಕ್ ಉದ್ಯೋಗಿಗಳ ಪ್ರಪ್ರಥಮ ಸಂಘಟನೆಯಾಗಿ ಸ್ಥಾಪನೆಗೊಂಡಿತು. ಸ್ಥಾಪನೆಯಾದ ದಿನದಿಂದಲೂ ಬ್ಯಾಂಕ್ ಉದ್ಯೋಗಿಗಳ ಪರವಾಗಿ ಹೋರಾಟ ಮಾಡಿ ಬ್ಯಾಂಕ್ ನೌಕರರಿಗೆ ಅನೇಕ ಸೌಲಭ್ಯಗಳನ್ನು ನೀಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. 1960 ರ ದಶಕದಲ್ಲಿ ಬ್ಯಾಂಕ್ ರಾಷ್ಟ್ರೀಕರಣಕ್ಕಾಗಿ ಸುದೀರ್ಘವಾದ ಹೋರಾಟ ಮಾಡಿ, 1969ರಲ್ಲಿ ಬ್ಯಾಂಕ್ ರಾಷ್ಟ್ರೀಕರಣಕ್ಕೆ ಕಾರಣವಾದ ಏಕೈಕ ಬ್ಯಾಂಕ್ ನೌಕರರ ಸಂಘಟನೆ ಎಂಬ ಕೀರ್ತಿಗೆ ಭಾಜನವಾಯಿತು. ಹಾಗಾಗಿಯೇ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘವನ್ನು ಬ್ಯಾಂಕ್ ರಾಷ್ಟ್ರೀಕರಣದ ಚಾಂಪಿಯನ್ ಎಂದೇ ಕರೆಯಲಾಗುತ್ತದೆ ಎಂದು ಬಣ್ಣಿಸಿದರು.

ಬ್ಯಾಂಕ್ ರಾಷ್ಟ್ರೀಕರಣದ ಮೂಲಕ ಲಕ್ಷಾಂತರ ನಿರುದ್ಯೋಗಿಗಳಿಗೆ ಬ್ಯಾಂಕುಗಳಲ್ಲಿ ಉದ್ಯೋಗ ಹಾಗೂ ಕೋಟ್ಯಾಂತರ ನಿರುದ್ಯೋಗಿಗಳಿಗೆ ಬ್ಯಾಂಕ್ ಸಾಲವನ್ನು ನೀಡುವುದರ ಮೂಲಕ ಸ್ವಉದ್ಯೋಗ ಮಾಡಲು ಅವಕಾಶ ಕಲ್ಪಿಸಲಾಯಿತು. ಬ್ಯಾಂಕ್‌ನಲ್ಲಿ ಖಾಲಿಯಿರುವ ಅನೇಕ ಖಾಯಂ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಲು ಕೂಡ ಸಂಘದ ವತಿಯಿಂದ ಹೋರಾಟವನ್ನು ಮಾಡಲಾಯಿತು. ಬ್ಯಾಂಕ್ ಉದ್ಯೋಗಿಗಳ ಉದ್ಯೋಗ ಭದ್ರತೆಗೆ ಹೋರಾಡಿ ಜಯಗಳಿಸಿದ ಪರಿಣಾಮವಾಗಿ ಇಂದಿಗೂ ಅಸಂಖ್ಯಾತ ಯುವಕರು ತಾವು ಇಂಜಿನಿಯರಿಂಗ್, ಎಮ್.ಬಿ.ಎ., ಎಮ್.ಸಿ.ಎ., ಮೊದಲಾದ ಉನ್ನತ ಶಿಕ್ಷಣ ಪದವಿಯನ್ನು ಹೊಂದಿದ್ದರೂ ಸಹ, ಬ್ಯಾಂಕ್ ಉದ್ಯೋಗಕ್ಕೆ ಭದ್ರತೆ ಇರುವ ಕಾರಣಕ್ಕಾಗಿ ಬ್ಯಾಂಕ್ ನೌಕರಿಯನ್ನೇ ಅರಸಿಕೊಂಡು ಬರುತ್ತಿದ್ದಾರೆ ಎಂದರು.

ಪ್ರಭಾಕರ್, ಹೆಚ್.ಎಲ್.ಪರ್ವಾನಾ, ಡಿ.ಪಿ.ಚಡ್ಡಾ, ತಾರಕೇಶ್ವರ್ ಚಕ್ರವರ್ತಿ, ಎನ್.ಸಂಪತ್, ಅಜಯ್ ಮಾಂಜ್ರೇಕರ್, ರಾಮಕೃಷ್ಣ ರೆಡ್ಡಿ ಮೊದಲಾದ ಮಹಾನ್ ನಾಯಕರುಗಳು ತಮ್ಮ ಜೀವನವನ್ನೇ ಬ್ಯಾಂಕ್ ನೌಕರರ ಸಂಘಟನೆಗಾಗಿ ಮುಡಿಪಾಗಿಟ್ಟ ಮಹಾನ್ ಚೇತನಗಳು ಎಂದು ಅವರು ಸ್ಮರಿಸಿದರು.

ಪ್ರಸ್ತುತ ಕಾಂ.ರಾಜನ್ ನಗರ್, ಸಿ.ಹೆಚ್.ವೆಂಕಟಾಚಲಂ, ಹೆಚ್.ವಸಂತ ರೈ, ಪಿ.ಎಸ್.ಸುಂದರೇಶನ್, ಪಿ.ಆರ್. ಕಾರಂತ್, ಕಾಂ.ಎಂ.ಎಸ್.ಶ್ರೀನಿವಾಸನ್, ಕಾಂ. ಜಯನಾಥ್, ಕಾಂ.ಕೆ.ಜಿ.ಫಣೀಂದ್ರ, ವಿನ್ಸೆಂಟ್ ಡಿಸೋಜ ಮೊದಲಾದವರ ಸಾರಥ್ಯದಲ್ಲಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ ಅತ್ಯಂತ ಸಮರ್ಥವಾಗಿ ಮುನ್ನಡೆಯುತ್ತಿದೆ ಎಂದು ನಾಯರಿ ಹೇಳಿದರು.

ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಕಾರ್ಯದರ್ಶಿ ಹೆಚ್. ಎಸ್.ತಿಪ್ಪೇಸ್ವಾಮಿ ಮಾತನಾಡಿ, ಬ್ಯಾಂಕಿಂಗ್ ಸೌಲಭ್ಯವು ಪ್ರತಿಯೊಬ್ಬ ಭಾರತೀಯನ ಮೂಲಭೂತ ಹಕ್ಕಾಗಬೇಕು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳು ಗಳಿಸುವ ಲಾಭವು ದೇಶದ ಜನರ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕೇ ವಿನಃ ಖಾಸಗಿ ಬಂಡವಾಳಷಾಹಿಗಳ ಲೂಟಿಗಾಗಿ ಅಲ್ಲ ಎನ್ನುವುದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಸ್ಪಷ್ಟವಾದ ನಿಲುವಾಗಿದೆ. ಇದಕ್ಕಾಗಿ ಸತತವಾಗಿ ಹೋರಾಟ ನಡೆಸಿಕೊಂಡು ಬರಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ವಿಶೇಷ ಆಹ್ವಾನಿತ ಹೆಚ್.ಸೂಗೂರಪ್ಪ, ಪದಾಧಿಕಾರಿಗಳಾದ ಎಂ.ಎಂ.ಸಿದ್ದಲಿಂಗಯ್ಯ, ಸಿ.ಪರಶುರಾಮ, ಅಣ್ಣಪ್ಪ, ನಂದಾ, ಡಿ.ಎ.ಸಾಕಮ್ಮ, ಶ್ರೀನಿವಾಸ ಆರ್. ನಾಡಿಗ್, ಸುಮಂತ್ ಎಸ್ ಭಟ್, ಕೇಂದ್ರ ಸಮಿತಿ ಸದಸ್ಯರು ಗಳಾದ ಎಂ.ರಮೇಶ್, ಜ್ಞಾನೇಶ್ವರ ಮಾಳವಾಡೆ, ಪ್ರಶಾಂತ್ ಎಸ್, ಡಿ.ಹರ್ಷದ್, ಎಂ.ಎಂ.ಸಿದ್ದವೀರಯ್ಯ, ಬಿ.ಸತೀಶ್, ಕೆ.ಎಂ. ಆಂಜನೇಯಪ್ಪ, ಯಲ್ಲಪ್ಪ ಮುಂತಾದವರು ಉಪಸ್ಥಿತರಿದ್ದರು.

# ಕೈಗಾರಿಕೋದ್ಯಮಗಳ ನಿರೀಕ್ಷೆಗೆ ವಿದ್ಯಾರ್ಥಿಗಳು ಸಜ್ಜುಗೊಳ್ಳಬೇಕಿದೆ




### ಬಾಪೂಜಿ ಹೈಟೆಕ್ ಎಜುಕೇಷನ್ ಪದವಿ ಪ್ರದಾನದಲ್ಲಿ ರಿತು ಶರ್ಮ

ದಾವಣಗೆರೆ, ಏ. 21 - ಬದಲಾಗುತ್ತಿರುವ ಔದ್ಯಮಿಕ ಕ್ಷೇತ್ರದ ನಿರೀಕ್ಷೆಗೆ ತಕ್ಕನಾಗಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿದಲ್ಲಿ ಉದ್ಯೋಗಾವಕಾಶಗಳು ಅರಸಿ ಬರುತ್ತವೆ ಎಂದು ಬೆಂಗಳೂರಿನ ಬ್ರಿಲೋ ಸಂಸ್ಥೆಯ ವಿಶ್ವವಿದ್ಯಾಲಯ ಸಂಪರ್ಕ ಮುಖ್ಯಸ್ಥರಾದ ಶ್ರೀಮತಿ ರಿತು ಶರ್ಮ ಅಭಿಪ್ರಾಯಪಟ್ಟರು.

ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ಕಂಪ್ಯೂಟರ್ ಅಪ್ಲಿಕೇಶನ್ ವಿದ್ಯಾರ್ಥಿಗಳಿಗಾಗಿ ನಿನ್ನೆ ಏರ್ಪಡಿಸಿದ್ದ ಪದವಿ ಪ್ರದಾನ ಸಮಾರಂಭದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಚಿಮ್ಮಿ ಬರುವ ಉತ್ಸಾಹ - ಸ್ಫೂರ್ತಿ ಕೇವಲ ವಿದ್ಯಾರ್ಥಿ ಹಾಗೂ ಯುವ ದೆಸೆಯಲ್ಲಿ ಮಾತ್ರ ಇದ್ದರೆ ಸಾಲದು ಜೀವನಪೂರ್ತಿ ಇರಬೇಕು ಎಂದು ಹೇಳಿದರು.

ಭವ್ಯ ಚಿತ್ರಗಳು ಸ್ಮೃತಿ ಪಟಲದಲ್ಲಿ ಬರುತ್ತಿರಬೇಕು. ಅದರ ಸಾಕಾರಕ್ಕೆ ತುಡಿಯಬೇಕು, ದುಡಿಯಬೇಕು. ಇದಕ್ಕಾಗಿ ಕಲಿಕೆಯ ದಾಹ ಯಾವತ್ತೂ ಇರಬೇಕು ಎಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟರಲ್ಲದೇ ಆಧುನಿಕ ತಂತ್ರಜ್ಞಾನಗಳ ತಿಳುವಳಿಕೆ ಮತ್ತು ಅಳವಡಿಕೆಗಳೆ ನಿರಂತರ ಕಲಿಕೆ, ಇದರಿಂದ ಮಾತ್ರ ಪದವೀಧರರು ಮಾನವ ಸಂಪನ್ಮೂಲವಾಗಿ ಹೊರಹೊಮ್ಮಲು ಸಾಧ್ಯ. ಇಂತಹ ಮಾನವ ಸಂಪನ್ಮೂಲವು ವೈಯಕ್ತಿಕ ಕೌಟುಂಬಿಕ ಹಿತಗಳಿಗೆ ಸೀಮಿತವಾಗದೇ ರಾಷ್ಟ್ರ ಮತ್ತು ವಿಶ್ವದ ಹಿತಕ್ಕೂ ಕಾರಣವಾಗ ಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ಸಂಸ್ಥೆಯ ಚೇರ್ಮನ್, ಲೆಕ್ಕಪರಿಶೋಧಕ ಅಥಣಿ ಎಸ್.ವೀರಣ್ಣ ಮಾತನಾಡಿ, ತೀವ್ರ ಗತಿಯಲ್ಲಿ ಬದಲಾಗುತ್ತಿರುವ ತಂತ್ರಜ್ಞಾನಗಳ ತಿಳುವಳಿಕೆ ಪಡೆಯದೇ ಪದವೀಧರರಿಗೆ ಭವಿಷ್ಯವಿಲ್ಲ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ. ಬಿ. ವೀರಪ್ಪನವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸುಹಾನಾ ಹಾಗೂ ಸೂಫಿಯಾನ್ ನಿರೂಪಿಸಿದ ಕಾರ್ಯಕ್ರಮದಲ್ಲಿ ನಿರಂಜನ್ ಪ್ರಸಾದ್ ಪ್ರಾರ್ಥಿಸಿದರು. ಎಂ.ವಿ.ವಾಗೀಶ್ ಸ್ವಾಗತಿಸಿದರು. ಹೆಚ್.ನವೀನ್ ಹಾಗೂ ಎನ್. ಜ್ಯೋತಿ ಅತಿಥಿಗಳ ಪರಿಚಯ ಮಾಡಿದರು.

ಪದವೀಧರರಿಗೆ ಪ್ರತಿಜ್ಞಾ ವಿಧಿಯನ್ನು ವಿಜಯ್ ಎನ್.ರಾವ್ ಬೋಧಿಸಿದರು. ಶ್ರೀಮತಿ ಎಸ್.ವಿಂಧ್ಯಾ ಅತಿಥಿಗಳನ್ನು ಸನ್ಮಾನಿಸಿದರು. ಎಂ.ಎಸ್.ಪೂಜಾ ವಂದಿಸಿದರು.

# ಕಲಾವಿದರಿಗೆ ಪ್ರಾಯೋಗಿಕ ನಿಷ್ಠೆ ಮುಖ್ಯ

> ಕಲಾವಿದರನ್ನು ನೋಡುವ ಜನರ ಮನಸ್ಥಿತಿ ಬದಲಾಗಬೇಕು. ಜತೆಗೆ ಸಮಾಜದಲ್ಲಿ ಎಲ್ಲ ಕಲಾವಿದರಿಗೂ ಉತ್ತಮ ಸ್ಥಾನ ದೊರಕಬೇಕು.
> - ದತ್ತಾತ್ರೇಯ ಎನ್. ಭಟ್

ದಾವಣಗೆರೆ, ಏ.21- ಕಲಾಕ್ಷೇತ್ರದಲ್ಲಿ ಯಶಸ್ಸು ಕಾಣಲು ಕೇವಲ ಓದಿದರೆ ಸಾಲದು, ನಿಷ್ಠೆಯಿಂದ ಪ್ರಾಯೋಗಿಕ ಕಾರ್ಯ ಮಾಡಬೇಕು ಎಂದು ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಸತೀಶ್ ಕುಮಾರ್ ಪಿ. ವಲ್ಲೇಪುರೆ ಹೇಳಿದರು.

ನಗರದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಮಂಗಳವಾರ ನಡೆದ ವಿಶ್ವ ದೃಶ್ಯಕಲಾ ದಿನಾಚರಣೆಯಲ್ಲಿ ಅವರು 'ಲಿಯೊನಾರ್ಡೋ ಡ ವಿಂಚಿ' ಕುರಿತು ಉಪನ್ಯಾಸ ನೀಡಿದರು.

'ಲಿಯೊನಾರ್ಡೋ ಡ ವಿಂಚಿ' ಅವರು ತಮ್ಮ ಬಾಲ್ಯಾವಸ್ಥೆಯಿಂದಲೇ ಕಲೆಯಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು. ಕಲಾಕೃತಿಯಲ್ಲಿ ವಿಶೇಷ ಸಾಧನೆ ಮಾಡಿದ ಇವರ ಜನ್ಮದಿನದ ಅಂಗವಾಗಿ 2011ರಿಂದ ವಿಶ್ವ ದೃಶ್ಯಕಲಾ ದಿನಾಚರಣೆ ಆಚರಿಸಲು ಪ್ರಾರಂಭಿಸಿದರು ಎಂದು ತಿಳಿಸಿದರು.

ಇಂಜಿನಿಯರಿಂಗ್ ಚಿತ್ರಗಳು, ದೇಹದ ಅಂಗರಚನಾ ಶಾಸ್ತ್ರದ ಚಿತ್ರ ಬಿಡಿಸುವ ಮೂಲಕ ವೈದ್ಯಕೀಯ ಕ್ಷೇತ್ರಕ್ಕೆ ಅನೇಕ ಕೊಡುಗೆ ನೀಡಿದ್ದಾರೆ ಎಂದರು.

ಲಿಯೊನಾರ್ಡೋ ಡ ವಿಂಚಿ ಅವರು ಕಲಾಕೃತಿ ರಚಿಸುವ ಮೊದಲು ವಸ್ತುವಿನ ಅಂಗವನ್ನು ಸೂಕ್ಷ್ಮ ಹಾಗೂ ಗಂಭೀರವಾಗಿ ಗಮನಿಸುತ್ತಿದ್ದ ತಂತ್ರಗಳನ್ನು ಕಲಾ ವಿದ್ಯಾರ್ಥಿಗಳು ಕಲಿಕೆಯಲ್ಲಿ ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

'ಮತದಾನ ಜಾಗೃತಿ' ಕುರಿತು ಬೋಧನಾ ಸಹಾಯಕ ದತ್ತಾತ್ರೇಯ ಎನ್. ಭಟ್ ಉಪನ್ಯಾಸದಲ್ಲಿ ಮಾತನಾಡಿ, ಯುವಕರು ಮತದಾನ ಪ್ರಕ್ರಿಯೆಯಿಂದ ಹಿಂದೇಟು ಹಾಕುತ್ತಿರುವುದು ಪ್ರಜಾಪ್ರಭುತ್ವಕ್ಕೆ ಮಾಡುತ್ತಿರುವ ಮೋಸ ಎಂದರು.

ಮತದಾನ ಮಾಡುವುದು ಪ್ರತಿಯೊಬ್ಬನ ಆದ್ಯ ಕರ್ತವ್ಯ. ಮತದಾನವನ್ನು ನಿಷ್ಠೆ ಹಾಗೂ ಜವಾಬ್ದಾರಿಯಿಂದ ಮಾಡುವಂತೆ ಹೇಳಿದರು.

ಮೇ.7ರಂದು ಮತದಾನ ಮಾಡುವ ಮೂಲಕ ನಮ್ಮ ಹಕ್ಕನ್ನು ಚಲಾಯಿಸಿ ಉತ್ತಮ ಜನಪ್ರತಿನಿಧಿ ಆಯ್ಕೆ ಮಾಡೋಣ ಎಂದು ಹೇಳಿದರು.

ಪ್ರಾಚಾರ್ಯ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್, ಸಂಚಾಲಕರಾದ ಡಿ. ಸುರೇಶ್, ಆರ್. ಅರುಣ್, ನಿವೃತ್ತ ಪ್ರಾಧ್ಯಾಪಕ ರವೀಂದ್ರ, ಶಿಲ್ಪಾ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಎ.ಆರ್. ನವ್ಯಾ ಪ್ರಾರ್ಥನೆ ಮಾಡಿದರು. ಬೋಧನಾ ಸಹಾಯಕ ನವೀನ್ ಕುಮಾರ್ ಸ್ವಾಗತಿಸಿದರು.

## ರಾಜವೀರ ಮದಕರಿ ನಾಯಕ ವೃತ್ತದ ಬಸ್ ತಂಗುದಾಣ ಕಾಮಗಾರಿ ಕಳಪೆ



ದಾವಣಗೆರೆ, ಏ. 21 - ದಾವಣಗೆರೆ ನಗರಕ್ಕಾಗಲೀ, ಜಿಲ್ಲೆಗಾಗಲೀ ಯಾವುದೇ ಅನುದಾನ ತರದ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಕಾಂಗ್ರೆಸ್ ಅನುದಾನವನ್ನು ಬಳಸಿ ಕೊಂಡು ನಾವೇ ಅನುದಾನ ತಂದಿದ್ದೇವೆ ಎಂದು ನಂಬಿಸಿ ಕಳಪೆ ಕಾಮಗಾರಿ ಮಾಡಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ದೂರಿದೆ.

ಇದಕ್ಕೆ ನಿದರ್ಶನವೆಂಬಂತೆ ನಗರದ ರಾಜವೀರ ಮದಕರಿ ನಾಯಕ ವೃತ್ತದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಿಸಿರುವ ಬಸ್ ತಂಗುದಾಣವು ನಿನ್ನೆ ಬೀಸಿದ ಗಾಳಿಗೆ ಬಿದ್ದಿದೆ. ಇದನ್ನು ನೋಡಿದರೆ ಸಂಸದರ ಇಚ್ಛಾಶಕ್ತಿ ಗೊತ್ತಾಗಲಿದೆ ಎಂದು ಲೇವಡಿ ಮಾಡಿದ್ದಾರೆ.

ಸಂಸದ ಸಿದ್ದೇಶ್ವರ ಅವರು ಮಾಡಿರುವ ಕೆಲಸಗಳು ಬೆರಳೆಣಿಕೆಯಷ್ಟು ಮಾತ್ರ. ಅವು ಸಹ ಸಂಪೂರ್ಣ ಕಳಪೆಯಿಂದ ಕೂಡಿವೆ. ಇದಕ್ಕೆ ಇಂದು ಬಸ್ ತಂಗುದಾಣ ಸೇರಿದೆ. ಡಿಸಿಎಂ ಬಳಿಯ ಕೆಳ ಸೇತುವೆ, ಶಿರಮಗೊಂಡನಹಳ್ಳಿ ಮತ್ತು ಅಶೋಕ ರಸ್ತೆಯ ಕೆಳ ಸೇತುವಗಳು ಸಂಸದರ ಪ್ರಬುದ್ಧತೆಗೆ ಸಾಕ್ಷಿ ಎಂದು ಕಾಂಗ್ರೆಸ್ ಟೀಕಿಸಿದೆ.

## ಗಾಂಧಿನಗರದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆ



ದಾವಣಗೆರೆ, ಏ. 21 - ಲೋಕಸಭಾ ಕ್ಷೇತ್ರದ ಗಾಂಧಿನಗರ ಸೇರಿದಂತೆ, ವಿವಿಧ ಬಡಾವಣೆಯ ನೂರಾರು ಯುವಕರು ಬಿಜೆಪಿ ತೊರೆದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಗಾಂಧಿನಗರದ ಗಿರೀಶ್, ಎಲ್.ಸಿ. ನಿಖಿಲ್, ಮಂಜುನಾಥ್ ಗಾರೆ, ವಿಜಯನಗರ ಬಡಾವಣೆಯ ಶಿವರಾಜ್, ಎಸ್.ಪಿ.ಎಸ್. ನಗರದ ಮಂಜುನಾಥ್, ಜಾಲಗಾರ ಹಟ್ಟಿ ಗುರುರಾಜ್, ಯಲ್ಲಮ್ಮನಗರದ ಡಬಲ್ ರಸ್ತೆಯ ನಿಕ್ಕಿ, ಪರಶುರಾಮ್ ಪಾರಿವಾಳ್, ಯರಗುಂಟೆಯ ನರೇಶ್, ನರೇಂದ್ರ, ಹಲುವಾಗಲು ಶ್ರೀನಿವಾಸ್, ಪ್ರವೀಣ್ ಕುಮಾರ್, ಗಣೇಶ್, ಮರಿದೇವ್, ಆರ್. ನಿಂಗರಾಜ್, ಗಿರೀಶ್ ಮಂಡ, ಪ್ರವೀಣ್, ಸುನೀಲ್, ಪ್ರವೀಣ್, ನಿಂಗರಾಜ್ ಎಂಬುವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಯುವಕರನ್ನು ಎಸ್.ಎಸ್. ಮಲ್ಲಿಕಾರ್ಜುನ್ ಅವರು ಆತ್ಮೀಯವಾಗಿ ಪಕ್ಷದ ಶಾಲನ್ನು ಹಾಕಿ ಬರಮಾಡಿಕೊಂಡರು.

ಈ ವೇಳೆ ಬಿ.ಹೆಚ್. ವೀರಭದ್ರಪ್ಪ, ಅಯೂಬ್ ಪೈಲ್ವಾನ್, ಎಸ್. ನಿಂಗಪ್ಪ, ಎಲ್.ಎಂ. ಹನುಮಂತಪ್ಪ, ಎಲ್.ಡಿ. ಗೋಣೆಪ್ಪ, ಎನ್. ನೀಲಗಿರಿಯಪ್ಪ, ಬಿ.ಎಂ. ಈಶ್ವರಪ್ಪ, ಎಲ್.ಎಮ್. ಹೆಚ್. ಸಾಗರ್, ಜೆ.ಡಿ. ಕುಮಾರ್, ಹೆಚ್.ಕೆ. ಹುಚ್ಚಪ್ಪ, ಟಿ. ರಮೇಶ್, ಹಲಗೇರಿ ಮಂಜಪ್ಪ, ಕುಂದವಾಡ ಮಂಜುನಾಥ್ ಮತ್ತಿತರರು ಪಾಲ್ಗೊಂಡಿದ್ದರು.

## ಹರೀಶ್ ಆರೋಪದಲ್ಲಿ ಹುರುಳಿಲ್ಲ: ಅದು ಮರಳಲ್ಲ

ದಾವಣಗೆರೆ, ಏ.21- ವಿಜಯನಗರ ಜಿಲ್ಲಾ ವ್ಯಾಪ್ತಿಯ ಚಿಕ್ಕಬಿದರೆ ಗ್ರಾಮದಲ್ಲಿ ಅಕ್ರಮವಾಗಿ ಮರಳು ಸಂಗ್ರಹಿಸಲಾಗಿದೆ ಎಂದು ಹರಿಹರ ಶಾಸಕ ಬಿ.ಪಿ. ಹರೀಶ್ ಅವರ ಹೇಳಿಕೆ ಸತ್ಯಕ್ಕೆ ದೂರವಾದದ್ದು ಎಂದು ಹರಿಹರ ನಗರಸಭೆ ಸದಸ್ಯ ಎಬಿಎಂ ವಿಜಯ್ ಕುಮಾರ್ ಹೇಳಿದ್ದಾರೆ.

ಭಾನುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹರೀಶ್ ಹೇಳಿರುವಂತೆ ಆ ಸ್ಥಳದಲ್ಲಿರುವುದು ಮರಳಲ್ಲ, ನದಿಯಲ್ಲಿ ಹೂಳು ತೆಗೆದಿರುವ ಮಣ್ಣು. ಅದು ಸರ್ಕಾರದ ಆಸ್ತಿಯಾಗಿದ್ದು, ಅದಕ್ಕೂ ನನಗೂ ಹಾಗೂ ಸಚಿವ ಮಲ್ಲಿಕಾರ್ಜುನ್ ಅವರಿಗೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು.


ಪತ್ರಿಕಾಗೋಷ್ಠಿಯಲ್ಲಿ ಶ್ರೀನಿವಾಸ ನಂದಿಗಾವಿ, ರಜನಿಕಾಂತ್, ವಕೀಲರಾದ ಆನಂದ್ ಇದ್ದರು.

## ಮಹಾವೀರ ದೇವಾಲಯಕ್ಕೆ ಭೇಟಿ ನೀಡಿದ ಗಾಯತ್ರಿ ಸಿದ್ದೇಶ್ವರ



ದಾವಣಗೆರೆ, ಏ.21- ಆಚಾರ್ಯ ಭಗವಂತ ಶ್ರೀ ಮಹಾಸೇನ್ ಸುರೀಶ್ವರ ಜೀ ಮಹಾರಾಜರ 2662 ನೇ ಮಹಾವೀರ ಜಯಂತಿ ಹಿನ್ನೆಲೆಯಲ್ಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ನರಸರಾಜ ಪೇಟೆಯಲ್ಲಿರುವ ಮಹಾವೀರ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನ ಕಮಿಟಿ ಅಧ್ಯಕ್ಷ ಜಗನ್ನಾಥ್, ನರೇಂದ್ರ ಕುಮಾರ್, ಅಶೋಕ ಕುಮಾರ್, ರಮೇಶ ಕುಮಾರ್, ಕೀರ್ತಿ, ರಾಜು ಬೈ, ಗೌತಮ್ ಜೈನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸವಿತಾ ಸಮಾಜ ಸಂಘದಿಂದ ನಾಳೆ ಶ್ರೀ ಹನುಮ ಜಯಂತಿ



ದಾವಣಗೆರೆ, ಏ. 21 - ಸವಿತಾ ಸಮಾಜ ಸಂಘದ ವತಿಯಿಂದ ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾರುತಿ ಮಂದಿರದಲ್ಲಿ ದಿನಾಂಕ 23 ಮಂಗಳವಾರ ಹನುಮ ಜಯಂತಿ ಆಚರಿಸಲಾಗುವುದು. ಅಂದು ಬೆಳಿಗ್ಗೆ 8ಕ್ಕೆ ಕುಂಕುಮಾರ್ಚನೆ, ಪಂಚಾಮೃತ ಅಭಿಷೇಕ, ನಡೆಸಲಾಗುವುದು. ಬೆಳಿಗ್ಗೆ 11 ಕ್ಕೆ ಮಹಾಮಂಗಳಾರತಿ ಪ್ರಸಾದ ವಿನಿಯೋಗ ಕಾರ್ಯಕ್ರಮ ಇರುತ್ತದೆ ಎಂದು ಸವಿತಾ ಸಮಾಜ ಸಂಘದ ಅಧ್ಯಕ್ಷ ರಂಗಸ್ವಾಮಿ ತಿಳಿಸಿದ್ದಾರೆ.

## ಕೆ.ಎಸ್.ಎಸ್ ಕಾಲೇಜಿನಲ್ಲಿ ಇಂದು ವಿಶ್ವ ಭೂ ದಿನಾಚರಣೆ

ಕರ್ನಾಟಕ ರಾಜ್ಯ ವಿಜ್ಞಾ ಪರಿಷತ್ ಜಿಲ್ಲಾ ಬಾಲಭವನ ಸಮಿತಿ, ಕೆ.ಎಸ್.ಎಸ್. ಶಿಕ್ಷಣ ಮಹಾ ವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಇಂದು ಬೆಳಿಗ್ಗೆ 11ಕ್ಕೆ ವಿಶ್ವ ಭೂ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಗೌರವಾಧ್ಯಕ್ಷ ಡಾ. ಜೆ.ಬಿ. ರಾಜ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಕೆ.ಎಸ್.ಎಸ್. ಫೌಂಡೇಷನ್ ವ್ಯವಸ್ಥಾಪಕ ನಿರ್ದೇಶಕ ಹೆಚ್.ಕೆ. ಬಸವರಾಜ್ ಅಧ್ಯಕ್ಷತೆ ವಹಿಸುವರು. ನೇರ್ಲಿಗಿ ಪ್ರಕಾಶ್ 'ಭೂಮಿ ಉಳಿದರೆ ನಾವೆಲ್ಲ' ವಿಷಯ ಕುರಿತು ಉಪನ್ಯಾಸ ನೀಡುವರು.

ಮುಖ್ಯ ಅತಿಥಿಗಳಾಗಿ ಬಿ.ಎಸ್. ಚನ್ನಬಸಪ್ಪ, ಆವರಗೆರೆ ರುದ್ರಮುನಿ ಉಪಸ್ಥಿತರಿರುವರು.

## ಚಳ್ಳಕೆರೆಯಲ್ಲಿ ಅಂಬೇಡ್ಕರ್ ಜಯಂತಿ



ಚಳ್ಳಕೆರೆ, ಏ. 21- ಇಲ್ಲಿನ ಕೃಷ್ಣ ರಾಜೇಂದ್ರ ಶಾಖಾ ಗ್ರಂಥಾಲಯದಲ್ಲಿ ಓದುಗರ ಸಮ್ಮುಖದಲ್ಲಿ ಮಹಾ ಮಾನವತಾವಾದಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಪಿ. ದ್ಯಾಮಯ್ಯ ಓದುಗರನ್ನು ಕುರಿತು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಸಿ.ವೈ.ಗಂಗಾಧರ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಕೆ. ವೆಂಕಟೇಶ ಮತ್ತಿತರರಿದ್ದರು.

# ಯುಪಿಎಸ್‌ಇನಲ್ಲಿ ರ್‍ಯಾಂಕ್ : ಸೌಭಾಗ್ಯ ಬೀಳಗಿಮಠ ಅವರಿಗೆ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್‌ನಿಂದ ಸನ್ಮಾನ





ದಾವಣಗೆರೆ, ಏ. 21 - ಯುಪಿಎಸ್‌ಇ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 101ನೇ ರ್‍ಯಾಂಕ್ ಪಡೆದು, ಕರ್ನಾಟಕಕ್ಕೆ 2ನೇ ರ್‍ಯಾಂಕ್ ಪಡೆದಿರುವ ನಗರದ ಸೌಭಾಗ್ಯ ಬೀಳಗಿಮಠ ಅವರನ್ನು ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ವತಿಯಿಂದ ಬ್ಯಾಂಕ್ ಸಭಾಂಗಣದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಸೌಭಾಗ್ಯ ಅವರನ್ನು ಸನ್ಮಾನಿಸಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್, ಮಕ್ಕಳು ಓದಿನ ಜೊತೆಗೆ ಇತರೆ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮುಖ್ಯ. ಮುಂದಿನ ಸಾಧನೆಯ ಬಗ್ಗೆ ಕನಸು ಕಾಣಬೇಕು. ಅಂಕ ಗಳಿಕೆ ಕಡೆಗೆ ಗಮನ ನೀಡದೆ ಅಭಿರುಚಿಗೆ ತಕ್ಕಂತೆ ಬೆಳೆಯಬೇಕು. ಸೌಭಾಗ್ಯ ಬೇರೆ ಮಕ್ಕಳಿಗೂ ಸ್ಫೂರ್ತಿಯಾಗಿದ್ದು, ನಗರಕ್ಕೆ ಕೀರ್ತಿ ತಂದಿರುವುದು ಹಾಗೂ ಅತ್ಯುನ್ನತ ನಾಗರಿಕ ಸೇವೆಗೆ ಅಣಿಯಾಗಿರುವುದು ಹೆಮ್ಮೆಯ ವಿಷಯ ಎಂದು ಸಂತಸ ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸೌಭಾಗ್ಯ ಬೀಳಗಿಮಠ, ಪಿಯುಸಿಯಲ್ಲಿ ಶೇ. 98 ಅಂಕ ಗಳಿಸಿ, ಯುಪಿಎಸ್ಸಿ ಓದಬೇಕೆಂಬ ಹಂಬಲದಿಂದ ಪಡೆದಿದ್ದ ವೈದ್ಯಕೀಯ ಕ್ಷೇತ್ರವನ್ನು ಬಿಟ್ಟು, ಧಾರವಾಡದ ಕೃಷಿ ವಿವಿಯಲ್ಲಿ ಬಿಎಸ್ಸಿ ಕೃಷಿ ಪದವಿ ಪೂರೈಸಿ ಅದೇ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದ ಅಶ್ವಿನಿ ಅವರ ಸಹಾಯದಿಂದ ಈ ಸಾಧನೆ ಸಾಧ್ಯವಾಯಿತು. ಆನ್‌ಲೈನ್‌ನಲ್ಲಿ ಮಾಕ್ ಟೆಸ್ಟ್, ಪದವಿ ಅಭ್ಯಾಸ ಮಾಡುವಾಗಲೇ ಯುಪಿಎಸ್ಸಿ ತಯಾರಿ ಹೀಗೆ ಪ್ರತಿದಿನ 7 ರಿಂದ 8 ಗಂಟೆ ಅಭ್ಯಾಸದಿಂದ ತಯಾರಿ ಮುಂದುವರಿಸಿದ್ದೆ ಎಂದು ಸೌಭಾಗ್ಯ ತಮ್ಮ ಅನುಭವ ಹಂಚಿಕೊಂಡರು.

ಸೌಭಾಗ್ಯ ತಂದೆ ಶರಣಯ್ಯ ಸ್ವಾಮಿ ಮಾತನಾಡಿ, ತಮ್ಮ ಮಗಳು ಎರಡನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಸವಾಲು ಗೆದ್ದಿರುವುದು ನಮ್ಮ ಸೌಭಾಗ್ಯ. ಯಾವುದೇ ಕೋಚಿಂಗ್ ಇಲ್ಲದೇ ಸಾಧನೆ ಮಾಡಿರುವುದು ತಮಗೆ ಹೆಮ್ಮೆಯ ವಿಷಯ ಎಂದು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ ಪರಶುರಾಮಪ್ಪ, ವ್ಯವಸ್ಥಾಪನಾ ಮಂಡಲಿಯ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕ ಎ.ಹೆಚ್. ಕುಬೇರಪ್ಪ, ನಿರ್ದೇಶಕರುಗಳಾದ ಕಿರುವಾಡಿ ವಿ. ಸೋಮಶೇಖರ್, ಶಂಕರ್ ಖಟಾವ್‌ಕರ್, ಎಸ್.ಕೆ. ಪ್ರಭು ಪ್ರಸಾದ್, ಕೆ.ಎಂ. ಜ್ಯೋತಿ ಪ್ರಕಾಶ್, ಪಿ.ಹೆಚ್. ವೆಂಕಪ್ಪ, ಬಿ. ನಾಗೇಂದ್ರಚಾರಿ, ಬಿ. ಚಿದಾನಂದಪ್ಪ, ಎ. ಕೊಟ್ರೇಶ್, ಶ್ರೀಮತಿ ಉಮಾ ವಾಗೀಶ್, ವಿಶಾಲ್ ಕುಮಾರ್ ಆರ್. ಸಂಘವಿ, ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್, ಶ್ರೀಮತಿ ಅನೂಪ ಡಾ|| ವೀರೇಂದ್ರಸ್ವಾಮಿ, ವೃತ್ತಿಪರ ನಿರ್ದೇಶಕರಾದ ಆರ್.ವಿ. ಶಿರಸಾಲಿಮಠ, ಕಿರಣ್ ಶೆಟ್ಟಿ ಮತ್ತು ವ್ಯವಸ್ಥಾಪನಾ ಮಂಡಲಿಯ ಸದಸ್ಯರಾದ ಕೆ.ಎಂ. ಬಸವರಾಜ್, ಶ್ರೀಮತಿ ಜಿ.ಸಿ. ವಸುಂಧರ, ಮತ್ತು ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ ಹಾಗೂ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಎನ್. ತುಳಸಿನಾಥ್, ಉಪ ಪ್ರಧಾನ ವ್ಯವಸ್ಥಾಪಕರಾದ ಕೆ.ಎಂ. ರುದ್ರಮುನಿ ಮತ್ತು ಕೆ.ಎಂ. ನಟರಾಜ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಈ ವೇಳೆ ಸೌಭಾಗ್ಯ ತಾಯಿ ಶರಣಮ್ಮ ದಂಪತಿ ಹಾಜರಿದ್ದರು.

## ನೇಹಾ ಹತ್ಯೆ : ನಗರದಲ್ಲಿ ಇಂದು ಪ್ರತಿಭಟನೆ

ದಾವಣಗೆರೆ, ಏ.21- ಹುಬ್ಬಳ್ಳಿಯ ನೇಹಾ ಹಿರೇಮಠ ಅವರನ್ನು ಹತ್ಯೆ ಮಾಡಿದ ಜಿಹಾದಿ ಮನಸ್ಥಿತಿಯುಳ್ಳ ವ್ಯಕ್ತಿಯನ್ನು ಕೂಡಲೇ ಗಲ್ಲಿಗೇರಿಸಬೇಕು ಎಂದು ಬಿಜೆಪಿ ಯುವ ಹಾಗೂ ಮಹಿಳಾ ಮೋರ್ಚಾ ಆಗ್ರಹಿಸಿದೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಯಲ್ಲೇಶ್, ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಿ ನಾಳೆ ಸೋಮವಾರ ಬೆಳಿಗ್ಗೆ 10.30ಕ್ಕೆ ಪ್ರತಿಭಟನೆ ನಡೆಸಲಾಗುವುದು ಎಂದರು. ಯುವ ಮೋರ್ಚಾ ಜಿಲ್ಲಾಧ್ಯಕ್ಷ ಆರ್.ಎಲ್. ಶಿವಪ್ರಕಾಶ್, ಮಹಿಳಾ ಮೋರ್ಚಾದ ಪುಷ್ಪಾ ವಾಲಿ ಮಾತನಾಡಿದರು. ಮುಖಂಡ ಶಿವಾನಂದ್, ಭಾಗ್ಯ ಪಿಸಾಳೆ ಪತ್ರಿಕಾಗೋಷ್ಠಿಯಲ್ಲಿದ್ದರು.

**TEACHERS WANTED**

**WANTED qualified Teachers for a Reputed College**

1. Science (CBZ Method) - 01
2. Social Science (English Medium) - 01

**QUALIFICATION**

- Graduation / Post graduation with B.Ed qualification in respective method.
- Minimum 5 year's Experience in teaching.
- Fluency in English is must.

Eligible and interested candidates can contact. M : 94800 24204

# ವಿಶೇಷ ಆರ್ಥಿಕ ವಲಯ ಸೃಜನೆಗೆ ಆದ್ಯತೆ

## ಚನ್ನಗಿರಿ ತಾಲ್ಲೂಕಿನಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರಚಾರ



ಚನ್ನಗಿರಿ, ಏ.21- ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಡಿಕೆ ಬೆಳೆಯುವುದರಿಂದ ಅಡಿಕೆ ಬೆಳೆಗಾರರ ಹಿತರಕ್ಷಣೆ ಹಾಗೂ ಅಡಿಕೆ ಮೌಲ್ಯವರ್ಧನೆಗೆ ಹೆಚ್ಚಿನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುವುದು ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.

ಚನ್ನಗಿರಿ ತಾಲ್ಲೂಕಿನ ರಾಜಗೊಂಡನಹಳ್ಳಿ, ತಿಪ್ಪಗೊಂಡನಹಳ್ಳಿ, ಹೊನ್ನೇಬಾಗಿ, ಅಜ್ಜಿಹಳ್ಳಿ, ನಲ್ಲೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮತಯಾಚಿಸಿ ಅವರು ಮಾತನಾಡಿದರು.

ಚನ್ನಗಿರಿ ತಾಲ್ಲೂಕಿನಲ್ಲಿ ಅಡಿಕೆ ಉಪ ಉತ್ಪನ್ನಗಳ ತಯಾರಿಕಾ ಘಟಕಗಳಿಗೆ ಪ್ರೋತ್ಸಾಹ ನೀಡಿದರೆ ಉದ್ಯೋಗ ಸೃಜನೆಯ ಜೊತೆಗೆ ಅಡಿಕೆ ಬೆಳೆಗಾರರ ಹಿತ ಕಾಪಾಡಬಹುದು. ತಾಲ್ಲೂಕಿನಲ್ಲಿ ವಿಶೇಷ ಆರ್ಥಿಕ ವಲಯ ಸೃಜನೆಗೆ ವಿಪುಲ ಅವಕಾಶಗಳಿದ್ದು, ಅವುಗಳ ಯಶಸ್ವಿ ಅನುಷ್ಠಾನಕ್ಕೆ ಮೊದಲ ಆದ್ಯತೆ ನೀಡಲಾಗುವುದು ಎಂದರು.

ತುಮ್ಕೋಸ್‌ಗೆ ತಾಲ್ಲೂಕು ಸೇರಿದಂತೆ ಅಕ್ಕಪಕ್ಕದ ತಾಲ್ಲೂಕಿನ ಬೆಳೆಗಾರರು ಅಡಿಕೆ ತಂದು ಮಾರಾಟ ಮಾಡುತ್ತಾರೆ. ಇಲ್ಲಿ ಹೆಚ್ಚಿನ ಆರ್ಥಿಕ ವಹಿವಾಟು ನಡೆಯುತ್ತಿದ್ದು, ಅಡಿಕೆ ಉಪ ಉತ್ಪನ್ನ ತಯಾರಿಕಾ ಘಟಕಗಳು ಪ್ರಾರಂಭವಾದರೆ ಯುವಕರಿಗೆ ಉದ್ಯೋಗ ದೊರೆಯಲಿದೆ. ಅಲ್ಲದೆ ಪರೋಕ್ಷವಾಗಿ ಅನೇಕ ಕುಟುಂಬಗಳಿಗೆ ಸಹಾಯ ವಾಗಲಿದೆ. ತಾಲ್ಲೂಕಿನಲ್ಲಿ ವಿಶೇಷ ಆರ್ಥಿಕ ವಲಯ ರಚನೆ ಮಾಡಲು ನನಗೆ ಮತ ನೀಡುವ ಮೂಲಕ ಅವಕಾಶ ನೀಡಿ ಎಂದು ಮನವಿ ಮಾಡಿದರು.

ಚನ್ನಗಿರಿ ತಾಲ್ಲೂಕಿನಲ್ಲಿ ಪ್ರವಾಸೋದ್ಯಮಕ್ಕೂ ಸಾಕಷ್ಟು ಅವಕಾಶಗಳಿವೆ. ಈಗಾಗಲೇ ಮಾಜಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಹಾಗೂ ಸಂಸದ ಜಿ.ಎಂ.ಸಿದ್ದೇಶ್ವರ್ ಅವರು ತಾಲ್ಲೂಕಿನ ಪ್ರವಾಸೋದ್ಯಮ ಅಭಿವೃದ್ಧಿಗೆ ನೀಲನಕ್ಷೆ ಸಿದ್ಧಪಡಿಸಿದ್ದಾರೆ. ಶಾಂತಿಸಾಗರದಲ್ಲಿ ಅತಿಥಿ ಗೃಹ, ಜಲಕ್ರೀಡಾ ಚಟುವಟಿಕೆಗೆ ಆದ್ಯತೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು ನೀಡುತ್ತೇನೆ ಎಂದರು.

ದಾವಣಗೆರೆ ಜಿಲ್ಲೆಯ ಹೊನ್ನಾಳಿ, ಚನ್ನಗಿರಿ, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ, ಚಿತ್ರದುರ್ಗ ತಾಲ್ಲೂಕುಗಳ 121 ಕೆರೆಗಳಿಗೆ ನೀರು ತುಂಬಿಸುವ ರೂ.597 ಕೋಟಿಯ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ ಬಿಜೆಪಿ ಸರ್ಕಾರದ ಸಾಧನೆಯೇ ವಿನಃ, ಇದರಲ್ಲಿ ಕಾಂಗ್ರೆಸ್ ಪಕ್ಷದ ಶ್ರಮ ಎಳ್ಳಷ್ಟು ಇಲ್ಲ. ಮುಗಿದಿರುವ ಕಾಮಗಾರಿ ಪೂರ್ಣಗೊಳಿಸುವುದೇ ನನ್ನ ಆದ್ಯತೆ ಎಂದು ಕಾಂಗ್ರೆಸ್ ಅಭ್ಯರ್ಥಿ ಸುಳ್ಳು ಹೇಳುತ್ತಿದ್ದಾರೆ. ಅವರಿಗೆ ಈ ಯೋಜನೆಯ ಗಂಧಗಾಳಿಯೂ ಗೊತ್ತಿಲ್ಲ ಎಂದು ಗಾಯತ್ರಿ ಸಿದ್ದೇಶ್ವರ ಹೇಳಿದರು.

ಬಿಜೆಪಿ ಯುವ ಮುಖಂಡ ಮಾಡಾಳ್ ಮಲ್ಲಿಕಾರ್ಜುನ್ ಮಾತನಾಡಿ, ಸಂಸದ ಸಿದ್ದೇಶಣ್ಣ ಅವರು ಚನ್ನಗಿರಿ ತಾಲ್ಲೂಕಿನ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಸಂಸದರ ಪ್ರದೇಶಾಭಿವೃದ್ಧಿ ಅನುದಾನ ಹೊರತುಪಡಿಸಿ ಕೇಂದ್ರದಿಂದ ವಿವಿಧ ಯೋಜನೆಗಳಲ್ಲಿ ಅನುದಾನ ತಂದು ಅಭಿವೃದ್ಧಿಗೆ ಸಹಕಾರ ನೀಡಿದ್ದಾರೆ. ಈಗ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರು ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಿ ಕಳುಹಿಸಿದರೆ ಚನ್ನಗಿರಿ ತಾಲ್ಲೂಕನ್ನು ಮಾದರಿ ತಾಲ್ಲೂಕನ್ನಾಗಿ ಅಭಿವೃದ್ಧಿ ಮಾಡುತ್ತಾರೆ ಎಂದರು.

ತುಮ್ಕೋಸ್ ಮಾಜಿ ಅಧ್ಯಕ್ಷ ಎಚ್.ಎಸ್. ಶಿವಕುಮಾರ್ ಮಾತನಾಡಿ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಡಿಕೆ ಬೆಳೆಗಾರರಿಗೆ ಅನುಕೂಲವಾಗಿದೆ. ಮೊದಲು ಬೇರೆ ರಾಷ್ಟ್ರದಿಂದ ಕಡಿಮೆ ಬೆಲೆಗೆ ಆಮದು ಮಾಡಿಕೊಂಡು ಇಲ್ಲಿನ ರೈತರಿಗೆ ತೊಂದರೆ ಕೊಡುತ್ತಿದ್ದರು. ಈಗ ಬೇರೆ ರಾಷ್ಟ್ರದಿಂದ ಆಮದು ಮಾಡಿಕೊಂಡರೂ ಆಮದು ಬೆಲೆ ನಿಗದಿ ಮಾಡಿದ್ದಾರೆ. ಹಾಗಾಗಿ ಅಡಿಕೆ ಬೆಲೆ 35 ಸಾವಿರಕ್ಕಿಂತ ಕಡಿಮೆ ಆಗುತ್ತಿಲ್ಲ. ಮೋದಿ ಅವರು ರೈತರಿಗೆ ಬೆಲೆ ಗ್ಯಾರಂಟಿ ಕೊಟ್ಟಿದ್ದಾರೆ ಎಂದರು.

ಮಾಜಿ ಸಚಿವ ಮುರುಗೇಶ್ ನಿರಾಣಿ ಪತ್ನಿ ಕಮಲಾ ನಿರಾಣಿ ಸೇರಿದಂತೆ ಚನ್ನಗಿರಿ ವಿಧಾನ ಸಭಾ ಕ್ಷೇತ್ರದ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ರಾಜ್ಯದ ಜನರ ಜೀವಕ್ಕೆ ಗ್ಯಾರಂಟಿ ಯಾರು..?

**ನಲ್ಲೂರು ಪ್ರಚಾರದಲ್ಲಿ ಮಾತನಾಡಿದ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು, ಮಾತೆತ್ತಿದರೆ ಗ್ಯಾರಂಟಿಗಳ ಬಗ್ಗೆ ಮಾತನಾಡುವ ಸಿದ್ದರಾಮಯ್ಯನವರೇ ಕಳೆದ 15 ದಿನಗಳಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಸಾಲು ಸಾಲು ಹತ್ಯೆಗಳು ಆಗುತ್ತಿವೆ. ಜನ ನಿರ್ಭೀತಿಯಿಂದ ಮನೆ ಬಿಟ್ಟು ಹೊರಬರಲು ಯೋಚಿಸು ವಂತಾಗಿದೆ, ರಾಜ್ಯದ ಜನರ ಜೀವಕ್ಕೆ ಗ್ಯಾರಂಟಿ ಕೊಡುವವರು ಯಾರು..? ಎಂದು ಪ್ರಶ್ನಿಸಿದರು. ಹತ್ಯೆಗಳ ಬಳಿಕೆ ತನಿಖಾ ಸಂಸ್ಥೆ ವರದಿ ಕೊಡುವ ಮುನ್ನವೇ ನೀವು ಮತ್ತು ನಿಮ್ಮ ಗೃಹ ಸಚಿವರು ಒಂದು ಕೋಮಿನವರನ್ನು ದೃಷ್ಟಿಯಲ್ಲಿಟ್ಟುಕೊಂಡು ಓಲೈಕೆ ಹೇಳಿಕೆ ನೀಡುತ್ತೀರಿ, ಇದು ತುಷ್ಟೀಕರಣದ ಪರಮಾವಧಿ ಎಂದು ಆಕ್ರೋಶ ವ್ಯಕ್ತಪಡಿಸಿದರು.**

# ಬೈರನಪಾದ ಏತ ನೀರಾವರಿ ಜಾರಿಗೆ ಆದ್ಯತೆ

## ಹರಿಹರ : ಪ್ರಚಾರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್



ಹರಿಹರ, ಏ.21- ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ಅನುಕೂಲವಾಗಿಸುವ ಸಂಪೂರ್ಣ ನೀರಾವರಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಹರಿಹರ ತಾಲ್ಲೂಕಿನ ಮಿಟ್ಲಕಟ್ಟೆ ಗ್ರಾಮದಲ್ಲಿ ಇಂದು ಬೆಳಿಗ್ಗೆ ಪ್ರಚಾರ ಕಾರ್ಯ ಆರಂಭಿಸಿದ ಪ್ರಭಾ ಮಲ್ಲಿಕಾರ್ಜುನ್ ಅವರು, ಸಾಲಕಟ್ಟೆ, ದೇವರಬೆಳಕೆರೆ, ಕಡ್ಲೆಗೊಂದಿ, ಸಲಗನಹಳ್ಳಿ, ಕೆ. ಬೇವಿನಹಳ್ಳಿ, ಬನ್ನಿಕೋಡು, ಷಂಶೀಪುರ, ಬೆಳ್ಳೂಡಿ, ಬ್ಯಾಲದಹಳ್ಳಿ, ಎಕ್ಕೆಗೊಂದಿ, ಭಾನುವಳ್ಳಿ, ರಾಯಪುರ, ರಾಮತೀರ್ಥ, ಕಮಲಾಪುರ, ಲಕ್ಕಶೆಟ್ಟಿಹಳ್ಳಿ, ಯಲವಟ್ಟಿ, ಸಿರಿಗೆರೆ, ಕಡರನಾಯಕನಹಳ್ಳಿ, ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮತದಾರರನ್ನುದ್ದೇಶಿಸಿ ಮಾತನಾಡಿದರು.

ನಾನೂ ಸಹ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ಹರಿಹರ ತಾಲ್ಲೂಕಿಗೆ ಹೊಂದಿಕೊಂಡಿರುವ ಕಕ್ಕರಗೊಳ್ಳ ಗ್ರಾಮದವರಾಗಿದ್ದು, ಕೊನೆ ಭಾಗದ ರೈತರ ಸಮಸ್ಯೆ ತಿಳಿದಿದ್ದೇನೆ. ದಾವಣಗೆರೆ, ಹರಿಹರ ಮತ್ತು ಹರಪನಹಳ್ಳಿ ತಾಲ್ಲೂಕಿನ ಕೊನೆ ಭಾಗಕ್ಕೆ ನೀರು ಹರಿಸಲು ಸತತ ಪ್ರಯತ್ನ ನಡೆಸಲಾಗುವುದು. ಜೊತೆಗೆ ಹರಿಹರ ತಾಲ್ಲೂಕಿನಲ್ಲಿ ನೆನೆಗುದಿಗೆ ಬಿದ್ದಿರುವ ಭೈರನಪಾದ ಏತ ನೀರಾವರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಗೊಳಿಸಲಾಗುವುದು ಮತ್ತು ಕೆರೆಗಳಿಗೆ ತುಂಗಭದ್ರಾ ನದಿ ನೀರು ತುಂಬಿಸುವ ಯೋಜನೆಯನ್ನೂ ಜಾರಿಗೊಳಿಸುತ್ತೇವೆ ಎಂದರು.

ಸ್ಥಳೀಯ ಯುವಕರಿಗೆ ಉದ್ಯೋಗ ನೀಡುವ ದೃಷ್ಟಿಯಿಂದ ರಸಗೊಬ್ಬರ ಕಾರ್ಖಾನೆಯನ್ನು ಮತ್ತು ಎಥೆನಾಲ್ ಉತ್ಪಾದನಾ ಘಟಕವನ್ನು ಆರಂಭಿಸಲು ಹೋರಾಟ ಮಾಡಲಾಗುವುದು. ಈ ಮೂಲಕ ಹರಿಹರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೊಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಹರಿಹರದಲ್ಲಿ ಎಲೆಪೆಂಡಿ (ವೀಳ್ಯೆದೆಲೆ) ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಇಲ್ಲದೇ ರೈತರು ಮತ್ತು ವ್ಯಾಪಾರಸ್ಥರಿಗೆ ಅನಾನುಕೂಲವಾಗುತ್ತಿದ್ದು, ಇದನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಮಾರುಕಟ್ಟೆ ವ್ಯವಸ್ಥೆ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಲೆಪೆಂಡಿಗೆ (ವೀಳ್ಯೆದೆಲೆ) ಬೇಡಿಕೆ ಇದ್ದು, ರಫ್ತು ಮಾರಾಟಕ್ಕೆ ಉತ್ತೇಜನ ನೀಡಲಾಗುವುದು ಎಂದರು.

ಈ ಭಾಗದ ಜನರು ನಮ್ಮ ಕುಟುಂಬದ ಮೇಲೆ ಸಾಕಷ್ಟು ಭರವಸೆ ಹೊಂದಿದ್ದು, ಅದನ್ನು ನಾವು ಹುಸಿಗೊಳಿಸುವುದಿಲ್ಲ. ನಮ್ಮ ಮೇಲೆ ನಿಮ್ಮ ಆಶೀರ್ವಾದ ಇದ್ದರೆ ಈ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿ ನಾವು ಮಾಡಿ ತೋರಿಸುತ್ತೇವೆ.

ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಹಾಗೂ ಕೇಂದ್ರ ಸರ್ಕಾರದ ಪಂಚ ನ್ಯಾಯ ಪಚ್ಚೀಸ್ ಗ್ಯಾರಂಟಿ ಭರವಸೆಗಳ ಕುರಿತು ಮತದಾರರಿಗೆ ಮಾಹಿತಿ ನೀಡಿ ಕಾಂಗ್ರೆಸ್ ಪಕ್ಷಕ್ಕೆ ಮತದಾನ ಮಾಡುವಂತೆ ಡಾ. ಪ್ರಭಾ ಮಲ್ಲಿಕಾರ್ಜುನ್ ಮನವಿ ಮಾಡಿದರು.

ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ಕ್ಷೇತ್ರಕ್ಕೆ ಹಾಲಿ ಸಂಸದರ ಕೊಡುಗೆ ಶೂನ್ಯವಾಗಿದ್ದು ಅಭಿವೃದ್ಧಿ ಪರ ಚಿಂತನೆ ಹೊಂದಿರುವ ಡಾ. ಪ್ರಭಾ ಅವರನ್ನು ಗೆಲ್ಲಿಸಿದರೆ ಜಿಲ್ಲೆಗೆ ಹೊಸ ಹೊಸ ಯೋಜನೆಗಳು ಜಾರಿಗೆ ಬರಲಿವೆ ಎಂಬ ವಿಶ್ವಾಸ ನಮಗಿದೆ ಎಂದರು.

ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಕಾಂಗ್ರೆಸ್ ಆಡಳಿತದ ರಾಜ್ಯ ಸರ್ಕಾರವು ವಿಧಾನಸಭಾ ಚುನಾವಣೆಯಲ್ಲಿ ನೀಡಿದಂತಹ ಗ್ಯಾರೆಂಟಿ ಭರವಸೆಯನ್ನು ಈಗಾಗಲೇ ಈಡೇರಿಸಿ ಜನರ ನಂಬಿಕೆಗೆ ಪಾತ್ರವಾಗಿದೆ.

ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿ ಅಧಿಕಾರ ಬಂದರೆ ಬಡವರ ಪರ, ದೀನ ದಲಿತ, ರೈತರಿಗೆ, ಕೂಲಿ ಕಾರ್ಮಿಕ, ನಿರುದ್ಯೋಗಿ ಯುವಕ ಯುವತಿಯರಿಗೆ, ಸೇರಿದಂತೆ ಎಲ್ಲರಿಗೂ ಸಹ ಅನುಕೂಲವಾಗುವಂತಹ ಅನೇಕ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಿದೆ ಎಂದು ತಿಳಿಸಿದರು

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿ. ಎಂ . ವಾಗೀಶ್ ಸ್ವಾಮಿ ಮಾತನಾಡಿ, ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಗೆಲುವು ಸೂರ್ಯನಷ್ಟೇ ಸತ್ಯ ವಾಗಲಿದ್ದು ಪಕ್ಷದ ಮುಖಂಡರು, ಕಾರ್ಯಕರ್ತರು ಬೂತ್ ಮಟ್ಟದಿಂದ ಕೆಲಸ ಮಾಡೋಣ ಎಂದರು.

ಮಾಜಿ ಸಚಿವ ಡಾ. ವೈ. ನಾಗಪ್ಪನವರ ಪುತ್ರಿ ಡಾ ರಶ್ಮಿ ಮಾತನಾಡಿ, ಡಾ ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಸಾಮಾಜಿಕ ಕಳಕಳಿ ಇದ್ದು, ಅವರ ಆಯ್ಕೆ ನಮ್ಮ ಜಿಲ್ಲೆಗೆ ವರದಾನವಾಗಲಿದೆ ಎಂದರು.

ಮುಖಂಡ ಹೆಚ್. ಎಸ್. ನಾಗರಾಜ್, ದೇವರಬೆಳಕೆರೆ ರುದ್ರಪ್ಪ, ಕಡ್ಲೆಗೊಂದಿ ಹನುಮಂತರೆಡ್ಡಿ, ಗುಬ್ಬಿ ರಂಗನಾಥ್, ಭಾನುವಳ್ಳಿ ಕನ್ನಪ್ಪ, ಬೆಳ್ಳೂಡಿ ಬಸವರಾಜ್, ನಂದಿತಾವರೆ ತಿಮ್ಮನಗೌಡ ಮಾತನಾಡಿದರು.

ಈ ಸಂದರ್ಭದಲ್ಲಿ ಜಿ ಪಂ ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ ಬಿ ಅಬೀದ್ ಅಲಿ, ಎಲ್ ಬಿ ಹನುಮಂತಪ್ಪ, ಮುಖಂಡರಾದ ಬಿಳಸನೂರು ತಿಪ್ಪೇರುದ್ರರೆಡ್ಡಿ, ಕುಂಬಳೂರು ವಿರೂಪಾಕ್ಷಪ್ಪ, ಜಿ ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ಸಿರಿಗೆರೆ ರಾಜಣ್ಣ, ಬಿ. ವೀರಯ್ಯ, ಬಿ. ಮಹಾರುದ್ರಪ್ಪ, ವೈ. ದ್ಯಾವಪ್ಪರೆಡ್ಡಿ, ಸುರೇಶ್ ಹಾದಿಮನಿ, ಹನಗವಾಡಿ ಕುಮಾರ್, ಎಬಿಎಂ ವಿಜಯ ಕುಮಾರ್, ಎಸ್. ಜಿ. ಪರಮೇಶ್ವರಪ್ಪ, ನಂದಿಗಾವಿ ತಿಪ್ಪೇಸ್ವಾಮಿ, ಆರ್. ಟಿ ಪ್ರಶಾಂತ್, ಶಾಮನೂರು ಎಸ್.ಜಿ.ವೇದಮೂರ್ತಿ, ಧನ್ಯ ಶಾಮನೂರು, ಕೆ. ಪಿ. ಗಂಗಾಧರ್, ಚಿಟ್ಟಕ್ಕಿ ನಾಗರಾಜ್, ಸೈಯದ್ ಜಾಕೀರ್, ಸಜ್ಜು, ಪಿ ಆರ್ ಕುಮಾರ್, ಭೋವಿ ಕುಮಾರ್, ಪಿ. ಹೆಚ್. ಶಿವಕುಮಾರ್, ಯೂನುಸ್, ಎಳೆಹೊಳೆ ಕುಮಾರ್, ಡಿ. ಕೆ. ಸಿದ್ದನಗೌಡ, ಕುಣೆಬೆಳಕೆರೆ ರುದ್ರಪ್ಪ ಸವಿತಾ ನಾಯ್ಕ್, ಮಿಟ್ಲಕಟ್ಟೆಯ ಬಿ .ಹೆಚ್.ವಿಶ್ವನಾಥ್, ಬಣಕಾರ ಚಂದ್ರಪ್ಪ, ಸುರೇಶ್, ಚಿತ್ರ ಸುರೇಶ್ ಸೇರಿದಂತೆ ಸ್ಥಳೀಯ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

### ರೈತರ ನೀರಿನ ಸಮಸ್ಯೆಗೆ ಪರಿಹಾರ, ಕೈಗಾರಿಕೆ ಸ್ಥಾಪನೆಗೆ ಒತ್ತು

# ಹುಬ್ಬಳ್ಳಿ ವಿದ್ಯಾರ್ಥಿನಿ ನೇಹಾ ಹಿರೇಮಠ್ ಹತ್ಯೆ ಸಮರ್ಥಿಸಿದ ಇಬ್ಬರ ಬಂಧನ

ಹುಬ್ಬಳ್ಳಿ, ಏ. 21 - ಹುಬ್ಬಳ್ಳಿ ವಿದ್ಯಾರ್ಥಿನಿ ನೇಹಾ ಹಿರೇಮಠ್ ಹತ್ಯೆ ಮಾಡಿದ್ದನ್ನು ಸಾಮಾಜಿಕ ಜಾಲತಾಣಗಳಲ್ಲಿ ಸಮರ್ಥಿಸಿಕೊಂಡಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ನೇಹಾ ಹಾಗೂ ಹತ್ಯೆ ಮಾಡಿದ ಫಯಾಜ್ ನಡುವೆ ಸಂಬಂಧ ಇತ್ತು ಎಂದು ಹತ್ಯೆ ಮಾಡಿದ್ದನ್ನು ಸಮರ್ಥಿಸಿಕೊಂಡಿದ್ದ ಇಬ್ಬರನ್ನು ಬಂಧಿಸಲಾಗಿದೆ.

ಹತ್ಯೆಗೀಡಾದ ನೇಹಾ ಹಾಗೂ ಫಯಾಜ್ ಇರುವ ಚಿತ್ರವನ್ನು ಹಂಚಿಕೊಂಡಿದ್ದ ಇಬ್ಬರು, 'ಉಭಯರದು ನಿಜವಾದ ಪ್ರೀತಿ, ಪ್ರೀತಿಗೆ ನ್ಯಾಯ ಸಿಗಲಿ' ಎಂದಿದ್ದರು. ನಂತರ ಪೊಲೀಸರು ಸಾಧಿಕ್ ಇಮಾಮ್ ತಡಕೋಡ ಹಾಗೂ ಆದಿಲ್ ಎಂಬುವವರನ್ನು ಬಂಧಿಸಿದ್ದಾರೆ.

## ಪಕ್ಷ ಗೀತೆಯಿಂದ ಜೈ ಭವಾನಿ, ಹಿಂದೂ ತೆಗೆಯುವುದಿಲ್ಲ : ಠಾಕ್ರೆ

ಮುಂಬೈ, ಏ. 21 - ತಮ್ಮ ಪಕ್ಷದ ಹೊಸ ಗೀತೆಯಿಂದ ಜೈ ಭವಾನಿ ಹಾಗೂ ಹಿಂದೂ ಎಂಬ ಪದಗಳನ್ನು ತೆಗೆಯುವುದಿಲ್ಲ ಎಂದು ಶಿವಸೇನೆ (ಯು.ಬಿ.ಟಿ.) ಮುಖ್ಯಸ್ಥ ಉದ್ಧವ್ ಠಾಕ್ರೆ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಠಾಕ್ರೆ, ಈ ಪದಗಳನ್ನು ತೆಗೆಯುವಂತೆ ಚುನಾವಣಾ ಆಯೋಗ ಸೂಚನೆ ನೀಡಿದೆ. ಇದನ್ನು ಪಾಲಿಸುವುದಿಲ್ಲ. ಜೈ ಭವಾನಿ ಎಂಬ ಪದ ತೆಗೆದು ಹಾಕುವಂತೆ ಹೇಳಿರುವುದು ಮಹಾರಾಷ್ಟ್ರಕ್ಕೆ ಮಾಡಿರುವ ಅವಮಾನ ಎಂದಿದ್ದಾರೆ.

ಛತ್ರಪತಿ ಶಿವಾಜಿ ಮಹಾರಾಜರು ದೇವಿ ತುಳಜಾ ಭವಾನಿ ಆಶೀರ್ವಾದದಿಂದ ಹಿಂದವಿ ಸಮಾಜ ಸ್ಥಾಪಿಸಿದ್ದರು. ನಾವು ದೇವಿ ಇಲ್ಲವೇ ಹಿಂದೂ ಧರ್ಮದ ಹೆಸರಿನಲ್ಲಿ ಮತ ಕೇಳುತ್ತಿಲ್ಲ. ಇಂತಹ ಅವಮಾನವನ್ನು ನಾವು ಸಹಿಸುವುದಿಲ್ಲ ಎಂದು ಠಾಕ್ರೆ ಹೇಳಿದ್ದಾರೆ.

ಸಾರ್ವಜನಿಕ ಸಭೆಗಳಲ್ಲಿ ಜೈ ಭವಾನಿ ಹಾಗೂ ಜೈ ಶಿವಾಜಿ ಎಂದು ಹೇಳುವುದನ್ನು ಮುಂದುವರೆಸುತ್ತೇವೆ ಎಂದೂ ಠಾಕ್ರೆ ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕರ್ನಾಟಕದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಪ್ರಚಾರ ಮಾಡುವಾಗ ಜೈ ಭಜರಂಗ ಬಲಿ ಘೋಷಣೆ ಕೂಗಿದ್ದರು. ಅಯೋಧ್ಯೆಯಲ್ಲಿ ರಾಮ ದೇವರ ದರ್ಶನಕ್ಕೆ ಉಚಿತ ಸೌಲಭ್ಯ ಕಲ್ಪಿಸುವುದಾಗಿ ಬಿಜೆಪಿ ನಾಯಕ ಅಮಿತ್ ಷಾ ಹೇಳಿದ್ದರು. ಇವರ ವಿರುದ್ಧ ಏಕೆ ಕ್ರಮ ತೆಗೆದುಕೊಂಡಿಲ್ಲ? ಎಂದೂ ಅವರು ಪ್ರಶ್ನಿಸಿದ್ದಾರೆ.

# ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಬದ್ಧ

## ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತೇನೆ: ವಿನಯ್ ಕುಮಾರ್



ದಾವಣಗೆರೆ, ಏ.21- ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಬದ್ಧನಾಗಿದ್ದೇನೆ. ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ, ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ. ಲೋಕಸಭಾ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿ. ಆಮೇಲೆ ನೀವೇ ಹುಬ್ಬೇರುವಂತೆ ಕೆಲಸ ಮಾಡಿ ತೋರಿಸುತ್ತೇನೆ. ಒಂದು ಅವಕಾಶ ಕೊಟ್ಟು ನೋಡಿ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಮನವಿ ಮಾಡಿದರು.

ಭಾಷಾನಗರದ ಸಮೀಪವಿರುವ ಶಿವನಗರದಲ್ಲಿ ಮುಸ್ಲಿಂ ಬಾಂಧವರ ಜೊತೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ನಾನು ಕೇವಲ ಭರವಸೆ ಕೊಟ್ಟು ಹೋಗುವವನಲ್ಲ. ನಿಮ್ಮ ಸಮಸ್ಯೆಗಳಿಗೆ ಸದಾ ಸ್ಪಂದಿಸುತ್ತೇನೆ. ನಾನು ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದು, ಕಣದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ನಾನು ಯಾವ ಹೊಂದಾಣಿಕೆಯನ್ನೂ ಮಾಡಿಕೊಂಡಿಲ್ಲ. ತಪ್ಪು ಸಂದೇಶಗಳಿಗೆ ತಲೆಕೆಡಿಸಿಕೊಳ್ಳಬೇಡಿ, ಮಹತ್ವವನ್ನೂ ಕೊಡಬೇಡಿ ಎಂದು ಹೇಳಿದರು.

ಬಾಷಾ, ಆಜಾದ್ ನಗರ ಸೇರಿದಂತೆ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ನನ್ನನ್ನು ಭೇಟಿಯಾಗುತ್ತಿರುವ ಮುಖಂಡರು ಈ ಮಾಹಿತಿ ನೀಡಿದ್ದಾರೆ. ಯಾವುದೇ ಸಮಸ್ಯೆಗಳಿದ್ದರೂ ನನ್ನ ಬಳಿ ಬನ್ನಿ. ನಾನು ಲೋಕಸಭಾ ಸದಸ್ಯನಾದರೆ ಸಮಸ್ಯೆಗಳನ್ನು ಪರಿಹರಿಸುತ್ತೇನೆ. ಶಕ್ತಿ ಮೀರಿ ಪ್ರಯತ್ನಿಸುತ್ತೇನೆ ಎಂದು ತಿಳಿಸಿದರು.

ಮುಸ್ಲಿಂ ಸಮುದಾಯದವರು ಉನ್ನತ ಶಿಕ್ಷಣ ಪಡೆಯುವಂತಾಗಬೇಕು. ಬಡವರ ಮಕ್ಕಳು ವಿದ್ಯಾವಂತರಾಗಬೇಕು. ನಿಮ್ಮ ಮಕ್ಕಳು ಓದಿ ಒಳ್ಳೆಯ ಸ್ಥಾನಮಾನ ಪಡೆಯುವಂತಾಗಬೇಕು. ಉನ್ನತ ಹುದ್ದೆಗೂ ಹೋಗಬೇಕು. ಇದಕ್ಕೆ ನಾನು ನಿಮಗೆ ಸಹಾಯ ಮಾಡುತ್ತೇನೆ. ಲೋಕಸಭಾ ಚುನಾವಣೆಯಲ್ಲಿ ನನಗೆ ಮತ ನೀಡುವುದರ ಮೂಲಕ ಆರಿಸಿ ದೆಹಲಿಗೆ ಕಳುಹಿಸಬೇಕು ಎಂದು ಕೇಳಿಕೊಂಡರು.

ನಿಮ್ಮೆಲ್ಲರ ಸಮಸ್ಯೆಗಳನ್ನು ನನ್ನ ಸಮಸ್ಯೆ ಎಂದು ಪರಿಗಣಿಸಿ ಪರಿಹರಿಸಲು ಶ್ರಮಿಸುತ್ತೇನೆ. ಭರವಸೆ ಕೊಟ್ಟು ಹೋಗುವುದಿಲ್ಲ. ಈಡೇರಿಸಿದ ಬಳಿಕ ನೀವೇ ಹೇಳುತ್ತೀರಾ. ಹಾಗಾಗಿ, ಸ್ವಾಭಿಮಾನಿಯಾಗಿ ಪಕ್ಷೇತರನಾಗಿ ಕಣಕ್ಕಿಳಿದಿದ್ದೇನೆ. ನೀವೆಲ್ಲರೂ ಬೆಂಬಲಿಸಿ, ಗೆಲ್ಲಿಸಿ ಎಂದು ಮನವಿ ಮಾಡಿದರು.

ನಾನು ಹೋದ ಕಡೆಗಳಲ್ಲಿ ಎಲ್ಲರೂ ಬೆಂಬಲಿಸುತ್ತಿದ್ದಾರೆ. ಅಲ್ಪಸಂಖ್ಯಾತರು, ಲಿಂಗಾಯತರು, ವಾಲ್ಮೀಕಿ ಸಮುದಾಯವರು, ಲಿಂಗಾಯತ ಸಮಾಜದವರು ಸೇರಿದಂತೆ ಎಲ್ಲಾ ವರ್ಗದವರು ಜಾತಿ, ಧರ್ಮ ಭೇದ ಮರೆತು ಸಹಕಾರ ನೀಡುವುದಾಗಿ ಭರವಸೆ ನೀಡುತ್ತಿದ್ದಾರೆ. ಅಲ್ಪಸಂಖ್ಯಾತರು ಹೆಚ್ಚು ಹೆಚ್ಚಾಗಿ ಬೆಂಬಲ ನೀಡುತ್ತಿದ್ದಾರೆ. ನೀವೆಲ್ಲರೂ ಒಟ್ಟಾಗಿ ನನ್ನ ಗೆಲುವಿಗೆ ಕೆಲಸ ಮಾಡಿ. ಸ್ವಾಭಿಮಾನದ ಗೆಲುವು ನಿಮ್ಮದಾಗುತ್ತದೆ ಎಂದು ವಿನಯ್ ಕುಮಾರ್ ಹೇಳಿದರು.

## ಅಕ್ರಮ ಹಣ ಸಾಗಣೆ : ಬಿಜೆಪಿ ಪದಾಧಿಕಾರಿ ವಿರುದ್ಧ ಎಫ್.ಐ.ಆರ್.

ಬೆಂಗಳೂರು, ಏ. 21 – ಅಕ್ರಮವಾಗಿ ಕಾರಿನಲ್ಲಿ 2 ಕೋಟಿ ರೂ. ಸಾಗಿಸುತ್ತಿದ್ದ ಬಿಜೆಪಿ ಕಚೇರಿ ಕಾರ್ಯ ದರ್ಶಿ ಲೋಕೇಶ್ ಅಂಬೇಕಲ್ಲು ಹಾಗೂ ಇನ್ನಿಬ್ಬರ ವಿರುದ್ಧ ಎಫ್.ಐ.ಆರ್. ದಾಖ ಲಿಸಿರುವುದಾಗಿ ಮುಖ್ಯ ಚುನಾವಣಾ ಅಧಿಕಾರಿಗಳ ಕಚೇರಿ ತಿಳಿಸಿದೆ.

ಶನಿವಾರ ಚಾಮರಾಜಪೇಟೆಯಲ್ಲಿ ಎಸ್.ಎಸ್.ಟಿ. ತಂಡ ಪರಿಶೀಲನೆ ನಡೆಸುವಾಗ 2 ಕೋಟಿ ರೂ. ನಗದು ಪತ್ತೆಯಾಗಿದೆ. ಈ ಬಗ್ಗೆ ಆದಾಯ ತೆರಿಗೆ ಅಧಿಕಾರಿಗಳಿಗೆ ತಿಳಿಸಲಾಗಿದೆ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಬಿಜೆಪಿ ಕಚೇರಿ ಪದಾಧಿಕಾರಿ ಗಳನ್ನು ಕರೆಸಿ ವಿಚಾರಣೆ ನಡೆಸಿದ್ದಾರೆ. ಆದಾಯ ತೆರಿಗೆ ಇಲಾಖೆಯ ನಿಯಮ ಗಳ ಪ್ರಕಾರ ಈ ಹಣ ಸಕ್ರಮವಾದದ್ದು. ಆದರೆ, ಚುನಾವಣಾ ಆಯೋಗದ ನಿರ್ದೇಶನದಂತೆ ರಾಜಕೀಯ ಚಟುವಟಿಕೆಗಳಿಗೆ 10 ಸಾವಿರ ರೂ.ಗಳಿಗಿಂತ ಹೆಚ್ಚು ಹಣ ಪಾವತಿಸುವಾಗ ಅದು ಚೆಕ್ ಇಲ್ಲವೇ ಆನ್‌ಲೈನ್ ಸ್ವರೂಪದಲ್ಲಿರಬೇಕಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಹೇಳಿದ್ದಾರೆ.



**ಮಹಾವೀರ ಜಯಂತಿ**

ದಾವಣಗೆರೆ ನಗರದಲ್ಲಿ ಮಹಾವೀರ ತೀರ್ಥಂಕರ ಜಯಂತ್ಯುತ್ಸವವನ್ನು ಆಚರಿಸಲಾಯಿತು. ಜಯಂತಿ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ನೂರಾರು ಜನರು ಭಾಗವಹಿಸಿದ್ದರು.

## ನೇರ ತೆರಿಗೆ ಸಂಗ್ರಹ : ವರ್ಷಾಂತ್ಯಕ್ಕೆ ಶೇ.17.7ರಷ್ಟು ಹೆಚ್ಚಳ

ನವದೆಹಲಿ, ಏ. 21 - ನೇರ ತೆರಿಗೆ ಸಂಗ್ರಹ ಶೇ.17.7ರಷ್ಟು ಹೆಚ್ಚಾಗಿದ್ದು, ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ 19.58 ಲಕ್ಷ ಕೋಟಿ ರೂ. ಗಳಿಗೆ ತಲುಪಿದೆ.

ನೇರ ತೆರಿಗೆಯಲ್ಲಿ ಆದಾಯ ತೆರಿಗೆ ಹಾಗೂ ಕಾರ್ಪೊರೇಟ್ ತೆರಿಗೆಗಳ ಪಾಲೇ ಹೆಚ್ಚಾಗಿದೆ. ನೇರ ತೆರಿಗೆ ಸಂಗ್ರಹ ಬಜೆಟ್ ಅಂದಾಜಿಗಿಂತ 1.35 ಲಕ್ಷ ಕೋಟಿ ರೂ.ಗಳಷ್ಟು ಹೆಚ್ಚಾಗಿದೆ.


ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಕೀಲು ಮರುಜೋಡಣೆ
- ಮೊಣಕಾಲು ನೋವು
- ಹಿಪ್ ಮರುಜೋಡಣೆ
- ಭುಜದ ನೋವು
- ರಿವಿಷನ್ ಶಸ್ತ್ರಚಿಕಿತ್ಸೆ
- ಸ್ಪೋರ್ಟ್ಸ್ ಇಂಜುರೀಸ್
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಮಂಗಳವಾರ, 25ನೇ ಏಪ್ರಿಲ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ


ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



ವಿದೇಶ ಪ್ರಯಾಣ – ಶುಭ ಹಾರೈಕೆ





ಅಮೆರಿಕಾದಲ್ಲಿರುವ ಮಗನನ್ನು ಭೇಟಿಯಾಗಲು
ದಿನಾಂಕ : 23.04.2024 ನೇ ಮಂಗಳವಾರ ವಿದೇಶ ಪ್ರಯಾಣ
ಕೈಗೊಂಡಿರುವ ನಮ್ಮ ಸಹಕಾರಿಯ ಉಪಾಧ್ಯಕ್ಷರಾದ
ಶ್ರೀ ವಿ. ಹೆಚ್. ಕುಮಾರ್
ಹಾಗೂ ಸಹಕಾರಿಯ ನಿರ್ದೇಶಕರಾದ
ಶ್ರೀಮತಿ ಲತಾ ಕೆ. ಹಾಗೂ
ಮಗಳು ಪೂಜಾ ಕೆ.
ಇವರ ಪ್ರಯಾಣ ಸುಖಕರವಾಗಿರಲೆಂದು ಹಾರೈಸುವ..
ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ
ಹಾಗೂ ಪಿಗ್ಮಿ ಏಜೆಂಟರುಗಳು
ಸನ್ಮತಿ ಸೌಹಾರ್ದ ಸಹಕಾರಿ ಸಂಘ ನಿ.,
# 712, 1ನೇ ಮಹಡಿ, ಮಂಡಿಪೇಟೆ, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas